

# ಹೆಚ್ ಐ ವಿ ಆಪ್ತಸಲಹೆಗೆ ಮೂಲಾಧಾರವಾದ ಕರಡು ಪತ್ರ

## (ಪುರುಷರು ಇತರ ಪುರುಷರೊಡನೆ ಲೈಂಗಿಕ ಕ್ರಿಯೆಯಲ್ಲಿ ತೊಡಗುವವರಿಗಾಗಿ)

**ಹೆಚ್ ಐ ವಿ ಆಪ್ತಸಲಹಾ ಕಾರ್ಯಕ್ಕೆ ಮಾರ್ಗದರ್ಶಿ**
**ಸ್ವಇಚ್ಛೆಯಿಂದ ಪರೀಕ್ಷೆ ಹೊಂದುವವರಿಗೆ ಮತ್ತು ಆಪ್ತಸಲಹಾ ಕೇಂದ್ರಗಳಿಗೆ ನೀಡಿರುವುದು.**

## ಪರಿಚಯ

ಆಪ್ತಾ ಸಲಹಾ ಕಾರ್ಯವು ಪರೀಕ್ಷೆಗೆ ಮುನ್ನ ನೀಡುವ ಮುಖ್ಯ ಆವಶ್ಯಕತೆಯೆಂದರೆ ಇದನ್ನು ಹೊಂದಿರುವ ಕಕ್ಷಿದಾರನು ಹೆಚ್ ಐ ವಿ ಹರಡುವಿಕೆಯ ಬಗ್ಗೆ, ನಿಯಂತ್ರಣದ ಕುರಿತಾಗಿ ಸ್ವಂತ ಮತ್ತು ವೈದ್ಯಕೀಯ ಲಾಭಗಳನ್ನು ಹೊಂದಲು ಸಲಹೆ ನೀಡುವುದಾಗಿದೆ.

ರೋಗಿಯನ್ನು ಮುಕ್ತ, ತೀರ್ಪು ನೀಡದಂತಹ ಭಾಷೆಯಲ್ಲಿ ಆಪ್ತ ಸಲಹೆ ನೀಡಿ ವೈಯುಕ್ತಿಕ ಚೀಟಿಯಲ್ಲಿ ವಿವರಿಸ ಬೇಕು. ಇಂತಹ ಸಮಯದಲ್ಲಿ ಕಕ್ಷಿದಾರನು ಮುಚ್ಚುಮರೆಯಿಲ್ಲದೆ ಸುಗಮವಾಗಿ ಪ್ರಶ್ನೆಗಳನ್ನು ಕೇಳುವುದು ನಡವಳಿಕೆ ಬಗ್ಗೆ ಚರ್ಚಿಸುವುದು ಇರಬೇಕು.

ಪರೀಕ್ಷೆಯ ನಂತರದ ಆಪ್ತ ಸಲಹಾ ಕಾರ್ಯದಲ್ಲಿ ವಿಷಯಗಳನ್ನು ಸೃಷ್ಟಿಪಡಿಸಲು ಅವಕಾಶ ಇರುವುದಲ್ಲದೆ ಹೆಚ್ ಐ ವಿ ಯಿಂದ ಉಂಟಾಗುವ ಹಾನಿಯನ್ನು ತಡೆಯಲು ಇರಬೇಕಾದ ನಡವಳಿಕೆ ಮತ್ತು ಉತ್ತಮ ಸ್ವಾಸ್ಥ್ಯದ ಅಭ್ಯಾಸಗಳನ್ನು ತಿಳಿಹೇಳಬಹುದು. ಜೊತೆಗೆ ರೋಗಿಯ ಸ್ವಂತ ಕುಶಲತೆಯುಕ್ತಿಯಿಂದ ಹೇಗೆ ಹೆಚ್ ಐ ವಿ ಯನ್ನು ನಿಯಂತ್ರಿಸಬಹುದು ಎಂಬುದನ್ನು ಅರಿಯಬಹುದು. ಹೆಚ್ ಐ ವಿ ಸಂಬಂಧಿತ ಪ್ರಾಥಮಿಕ ರಕ್ಷಣಾ ವಿಧಾನ ಮತ್ತು ಅದರ ಲಾಭಗಳನ್ನು ವಿವರಿಸಬಹುದು. ಮೇಲಾಗಿ ಕಕ್ಷಿದಾರ ರೋಗಿಯು ತನ್ನ ಇತರ ಸಂಗಾತಿಗಳಿಗೆ ತನ್ನ ಬಗ್ಗೆ ಹೇಳಬಹುದೊ ಹೇಳಬಾರದೋ ಎಂಬುದನ್ನು ಕಲಿಯುತ್ತಾನೆ.

ಈ ಕೆಳಗೆ ನೀಡಲಾಗಿರುವ ಮೂಲಾದಾರದ ಕರಡು ಪತ್ರವು ಆಪ್ತ ಸಲಹಾ ಕಾರ್ಯದ ಮೊದಲು ಹಾಗು ನಂತರದ ವಿವರಗಳನ್ನು ಒಳಗೊಂಡಿದೆ.

ಈ ಮೂಲಾದಾರದ ವಿಷಯಗಳು ಅನುಭವಿ ಆಪ್ತ ಸಲಹಾಗಾರರ ಪರಿಣಿತ ನುಡಿಗಳಾಗಿರುವುದರಿಂದ, ಈಗಾಗಲೆ ಹೇಳಲ್ಪಟ್ಟಿರುವ ಆಪ್ತ ಸಲಹಾ ವಿಧಾನವನ್ನು ಹೊಂದಿದೆ. ಇದನ್ನು ಹೆಚ್ ಐ ವಿ ಆಪ್ತ ಸಲಹಾಕಾರರು ಪುಷ್ಟೀಕರಿಸಿದ್ದಾರೆ. ವೃತ್ತಿ ನಿರತ ವೈದ್ಯನು ಈ ಮೂಲಾದಾರವನ್ನು ವ್ಯಕ್ತಿಗತವಾಗಿ ರೋಗಿಗಳ ಮೇಲೆ ಪ್ರಯೋಗಿಸ ಬೇಕು. ಪರೀಕ್ಷೆಗೆ ಮುನ್ನ ನಡೆಸುವ ಭೇಟಿ ಸಂಭಾಷಣೆಯಲ್ಲಿ ವೈಯುಕ್ತಿಕ ಹಾನಿಯ ಲೆಕ್ಕಾಚಾರವನ್ನು ಅತಿ ಕಡಿಮೆ ಸಮಯದಲ್ಲಿ ತಿಳಿದುಕೊಳ್ಳಬೇಕು. ಏಕೆಂದರೆ ಅವರಿಗೆ ಇದರ ಬಗ್ಗೆ ತಿಳಿಯದೇ ಇರಬಹುದು. ಅಥವಾ ಕೆಲವೊಮ್ಮೆ ಚರ್ಚಿಸಲು ಸಿದ್ಧವಾಗಿರದೇ ಇರಬಹುದು. ಮತೊಂದೆಡೆ ವೈಯುಕ್ತಿಕ ಹಾನಿಯನ್ನು ಪೂರ್ವ ಆಪ್ತ ಸಲಹಾ ಕಾರ್ಯದಲ್ಲಿ ಲೆಕ್ಕಹಾಕುವುದರಿಂದ ರೋಗಿಯು ಮುಂಚಿತವಾಗಿ ಸ್ಪಷ್ಟವಾದ ಚಿತ್ರಣಪಡೆದು ಅವರು ತಮ್ಮ ಹಾನಿಕಾರಕ ನಡವಳಿಕೆಯನ್ನು ಬದಲಾಯಿಸಿಕೊಳ್ಳಲು ಸ್ಫೂರ್ತಿ ನೀಡಬಹುದು.

ಆಪ್ತಸಲಹೆ ನೀಡುವವರನ್ನು ನೀಡವವರು ‌‌‌‌‌‌‌‌‌‌‌‌‌‌‌‌‌‌‌‌‌ ಆಪ್ತ ಸಲಹೆಗೆ ಮಾಗ್ರದರ್ಶಿ ಎಂಬ ಕೈಪಿಡಿಯನ್ನು ಖಂಡಿತ ಈ ಕಿರುಹೊತ್ತಿಗೆಯನ್ನು ಓದುವುದರ ಜೊತೆಗೆ ಮುನ್ಸೂಚಕವಾಗಿ ಪಠಿಸ ಬೇಕು ಮತ್ತು ಸಂಸ್ಥೆಯು ನಗರ ಪಟ್ಟಣಗಳಲ್ಲಿ ಲಭ್ಯವಿರುವ ಎಲ್ಲ ಸೇವಾ ವಿವರಗಳನ್ನು ತಿಳಿದು ಕೊಂಡು ತಮ್ಮ ಸಂಸ್ಥೆಗೆ ನಿಕಟ ಸಂಪರ್ಕ ಹೊಂದಿರುವಂತೆ ನೋಡಿಕೊಳ್ಳಬೇಕು. ಇದರಲ್ಲಿ ಹೆಚ್ ಐ ವಿ ಪರೀಕ್ಷಾ ಸೇವೆ ಸರ್ಕಾರಿ ಮತ್ತು ಖಾಸಗಿ ಸೇವೆಗಳೂ ಸೇರಿವೆ.

- ಅವುಗಳ ಗುಣ ಮಟ್ಟ, ಗೌಪ್ಯತೆ, ಯೋಗ್ಯತೆ.
- ಈ ಪರೀಕ್ಷೆಗಳು ಅನಾಮಿಕವೇ ಮತ್ತು ಗುಪ್ತವಾಗಿರುವುದೇ.
- ಕೋತಿ, ಹಿಜರಾ, ಪುರುಷಕಾಮಿಗಳೆಂದು ಭೇದಭಾವ ತೋರುವರೆ, ನಿಂದೆಗೆ ಗುರಿಪಡಿಸುವರೇ.
- ಅವರಲ್ಲಿ ಸೂಕ್ತ ಆಪ್ತಸಲಹಾ ಮತ್ತು ಯೋಗ್ಯಸೇವಾ ಘಟಕಗಳು ಇವೆಯೆ.
- ಅವರಲ್ಲಿ ರೋಗ ನಿಧಾನ ವಾಸಿಮಾಡುವ ಔಷಧಿಗಳು ಇವೆಯೆ, ಅವುಗಳ ಖರ್ಚು ವೆಚ್ಚ
- ಇತರ ಸೇವಾ ಸಹಾಯಗಳು, ಸ್ವಸಹಾಯ ಗುಂಪುಗಳು ಇವೆಯೆ.

ಇತರ ಸೇವೆಗಳಡಿಯಲ್ಲಿ ಮಾದಕ ಮತ್ತು ಸಾರಾಯಿ ವ್ಯಸನಿಗಳಿಗೆ ನೀಡುವ ವೈದ್ಯಕೀಯ ಸಲಹಾ ಕೇಂದ್ರಗಳು ಮನೋವೈಜ್ಞಾನಿಕ ಶುಶ್ರೂಷಾ ಕೇಂದ್ರಗಳು ಸೇರುತ್ತವೆ. ಸ್ಥಳಿಯ ಕಾನೂನು ಮತ್ತು ಮಾನವ ಹಕ್ಕಿನ ಸೇವೆಗಳ ವಿವರವನ್ನು ಅರಿತಿರಬೇಕು.

ಅಂತಹ ಸಂಸ್ಥೆಗಳು ಸರಿಪಡಿಸಬಹುದಾದ ಸೂಕ್ತ ದೂರವಾಣಿ ಸಂಖ್ಯೆಗಳು ಪರಿಚಿತ ವ್ಯಕ್ತಿಗಳು ಮತ್ತು ಯೋಗ್ಯ ಸ್ವಾಸ್ಥ ಜೀವನದ ನಕ್ಷೆ ವಿವರಗಳು ಅದರಲ್ಲಿ ಹೆಚ್ ಐ ವಿ ಹೊಂದಿರುವವರು ಸ್ವೀಕರಿಸಬೇಕಾದ ಆಹಾರ ಮತ್ತು ಔಷಧಿಯ ವಿಚಾರಗಳ ವಿವರ ಇರಬೇಕು. ಇಂತಹ ಸಂಸ್ಥೆಗಳು ಪಾಸಿಟಿವ್ ಗುಂಪಿನವರೊಂದಿಗೆ ಅಂತರ್ಜಾಲವಿರಿಸಿಕೊಂಡು ಪಟ್ಟಣ ರಾಜ್ಯ ಮತ್ತು ದೇಶದ ಎಲ್ಲೆಡೆಯ ವಿವರ ಸಂಗ್ರಹಿಸಿರಬೇಕು. ಕಾನೂನು ಸಲಹೆ ನೀಡುವವರು ಕೋತಿ, ಹಿಜರಾ, ಸಲಿಂಗಕಾಮಿಗಳೆಂದು ಗುರುತಿಸಲ್ಪಟ್ಟ ಪುರುಷರು, ಇತರ ಪುರುಷಕಾಮಿಗಳು ಇಂತಹ ಸೇವೆಯಲ್ಲಿ ನಿರತರಾಗಿರುವವರು ಇವರುಗಳನ್ನು ಗುರುತಿಸಿ ವಿವರ ಸಂಗ್ರಹಿಸಿರಬೇಕು.

## ಪರೀಕ್ಷಾ ಪೂರ್ವ ಆಪ್ತ ಸಲಹಾಕಾರ್ಯಕ್ರಮ :

**1. ಆಪ್ತ ಸಲಹಾಕಾರ್ಯವನ್ನು ಆರಂಭಿಸುವ ಪ್ರಥಮ ಭೇಟಿ.**

ಅ. ಆಪ್ತ ಸಲಹೆ ನೀಡುವವರು ಬರುವ ರೋಗಿಗಳಿಗೆ ಸೂಕ್ತ ಸ್ನೇಹಮಯ ವಾತಾವರಣ ಸೃಷ್ಟಿಸಿ ಅವರಿಗೆ ಬೇಕಾದ ಸಹಕಾರ ಸಿಗುವುದೆಂಬ ಭರವಸೆಮೂಡಿಸಬೇಕು. ಅವರ ನಡುವೆ ಸಂಬಂಧ ಹೇಗಿರಬೇಕೆಂದು ಕೈಪಿಡಿಯ ಮಾದರಿಯಲ್ಲಿ ಮಾರ್ಗದರ್ಶನದಲ್ಲೆ ನೀಡಲಾಗಿದೆ.

ಆ. ಅವರಿಗೆ ಈ ಚರ್ಚೆಯು ಹಲವಾರು ಸ್ವಂತ ವೈಯುಕ್ತಿಕ ವಿಷಯಗಳನ್ನು ಹೊರಗೆಡವಲು ನಡೆಸಲಾಗುತ್ತಿದೆ ಮತ್ತು ಭಾಷೆಯ ಸ್ಪಷ್ಟವು ಮುಚ್ಚು ಮರೆ ಇಲ್ಲದೆ ಇರಬೇಕು.

ಇ. ಈ ಚರ್ಚೆಯಲ್ಲಿ ಹೇಳಲ್ಪಟ್ಟ ಎಲ್ಲಾ ವಿಷಯಗಳು ಅತ್ಯಂತ ಹಾಸ್ಯವಾಗಿರುತ್ತದೆ ಎಂದು ಅವರ ಮನಕ್ಕೆ ನಾಟುವಂತೆ ಹೇಳಬೇಕು.

## ಹೆಚ್ ಐ ವಿ ಪಸರಿಸುವಿಕ ಮತ್ತು ನಿಯಂತ್ರಣ :

ಅ. ಹೆಚ್ ಐ ವಿ ಮತ್ತು ಏಯ್‌ಡ್ಸ್ ಕುರಿತಾದ ಮೂಲ ಸೂಚನೆ, ವಿಷಯ, ವಿವರ ನೀಡಿರಿ. ಅವರನ್ನು ಹೆಚ್ ಐ ವಿ ಬಗ್ಗೆ ಏನು ತಿಳಿದುಕೊಂಡಿದ್ದಾರೆ ಆ ರೋಗಾಣು ಏಯ್‌ಡ್ಸ್‌ಗೆ ಕಾರಣವಾಗಬಹುದು. ಹೆಚ್ ಐ ವಿ ಯಿಂದ ಅಕ್ವಯರ್ಡ್ ಇಮ್ಯೂನ್ ಡೆಫಿಶಿಯೆನ್ಸಿ ಸಿಂಡ್ರೋಮ್ ಆಗುವುದು, ಇದನ್ನು ಏಯ್‌ಡ್ಸ್ ಎಂದು ಕರೆಯುವುದು.ಹೆಚ್ ಐ ವಿ ಸೋಂಕಿನಿಂದ ನಿಮ್ಮ ದೇಹದಲ್ಲಿ ರೋಗ ನಿರೋದಕ ಶಕ್ತಿನಾಶವಾಗುತ್ತದೆ. ಯಾವಾಗ ಈ ರೀತಿಯ ರೋಗ ನಿರೋಧಕ ಶಕ್ತಿಯು ನಾಶವಾಗುವುದೋ ಆಗ ನಿಮ್ಮ ದೇಹವು ಯಾವುದೇ ರೀತಿಯ ಖಾಯಿಲೆಗಳನ್ನು ಬಾರದಂತೆ ತಡೆಯಲಾಗದು. ಅತ್ಯಂತ ಪ್ರಬಲವಾದ ಕಠಿಣ ಖಾಯಿಲೆಯೆಂದರೆ ಹೆಚ್ ಐ ವಿ ಸೋಂಕಿನಿಂದ ಉಂಟಾಗುವ ಏಯ್‌ಡ್ಸ್. ಏಯ್‌ಡ್ಸ್‌ನಿಂದ ಬಳಲುವ ರೋಗಿಯು ಅಲ್ಪವಾದ ಖಾಯಿಲೆಯಿಂದ ಬಳಲಿದರೂ ಆರೋಗ್ಯಕರವಾದ ರೋಗ ನಿರೋಧಕ ಶಕ್ತಿನಾಶವಾಗಿರುವುದರಿಂದ ಭೀತಿ ಪಡಲೇಬೇಕಾಗುತ್ತದೆ. ಯಾವುದೇ ವ್ಯಕ್ತಿಗೆ ಹೆಚ್ ಐ ವಿ ಸೋಂಕು ಉಂಟಾಗಿದ್ದರೂ ಅದು ಸಂಪೂರ್ಣವಾಗಿ ಏಯ್‌ಡ್ಸ್ ಎಂದು ಖಚಿತವಾಗಿ ಹೇಳಲು ಸುಮಾರು ಹತ್ತು ವರ್ಷಗಳೇ ಬೇಕಾಗಬಹುದು. ಹೆಚ್ ಐ ವಿ ಸೋಂಕಿನಿಂದ ಬಳಲುವವರೆಲ್ಲರೂ ಏಯ್‌ಡ್ಸ್ ಪಡೆದೆ ಪಡೆಯುತ್ತಾರೆ ಎಂಬುದು ಇನ್ನೂ ನಿಶ್ಚಯವಾಗದ ಸಂಗತಿಯಾಗಿದೆ. ಬಹಳ ಜನರಿಗೆ ಹೆಚ್ ಐ ವಿ ಸೋಂಕು ತಾಗಿದ್ದರೂ ಸಹ ಅವರಿಗೆ ಅದರ ಬಗ್ಗೆ ಅರಿವಾಗುವುದಿಲ್ಲ. ಇಂತಹ ವ್ಯಕ್ತಿಗಳಿಂದ ಇತರರಿಗೂ ಸುಲಭವಾಗಿ ಹೆಚ್ ಐ ವಿ ಪಸರಿಸಬಹುದು. ಹೆಚ್ ಐ ವಿ ಆ್ಯಂಟಿಬಾಡಿ ಪರೀಕ್ಷೆಯನ್ನು ಸೂಚಿಸುವುದು ಏಕೆಂದರೆ ಅವರು

ನಿಜವಾಗಿ ಹೆಚ್ ಐ ವಿ ಗೆ ಬಲಿಯಾಗಿರುವರೇ ಎಂಬುದನ್ನು ನಿರ್ಧರಿಸಲಿಕ್ಕಾಗಿ. ಅವರ ಹೆಚ್ ಐ ವಿ ರೋಗದ ಗುಣಮಟ್ಟವನ್ನು ಅರಿತ ಮೇಲೆ ಆರೋಗ್ಯದ ವಿಧಾನಗಳನ್ನು ಪಾಲಿಸಬೇಕಾದ ನಿಯಮಗಳನ್ನು ತಿಳಿಸಿ, ವೈದ್ಯಕೀಯ ಉಪಚಾರ ಅತಿಕಡಿಮೆ ಇರುವ ಸ್ಥಳದಲ್ಲೂ ಸೂಕ್ತ ಸಲಹೆ ಸೇವೆ ನೀಡಬಹುದು.

**ಆ. ಹರಡುವಿಕೆ ಮತ್ತು ನಿಯಂತ್ರಣ ಕುರಿತಾದ ಸೂಚನೆಗಳು :**

1. ಹೆಚ್ ಐ ವಿ ಪೀಡಿತನಾದವನು ಸಾಮಾನ್ಯ ವ್ಯಕ್ತಿಯೊಂದಿಗೆ ಕೆಲವುರೀತಿಯಲ್ಲಿ ಲೈಂಗಿಕ ಕ್ರಿಯೆಯಲ್ಲಿ ತೊಡಗಿದಾಗ ಮಾತ್ರ ಅದನ್ನು ಇತರರಿಗೆ ಹರಡಲು ಸಾಧ್ಯವೆಂಬುದನ್ನು ವಿವರಿಸಿರಿ. ಇಂತಹ ರೋಗಿಯ ಇತರರಿಗೆ ಸೋಂಕನ್ನು ಹರಡಬಹುದಾದ ವಿಧಾನಗಳೆಂದರೆ ?

   - ಲೈಂಗಿಕ ಸಂಭೋಗದಲ್ಲಿ (ಯೋನಿ ಅಥವಾ ಗುಧಮೈಥುನ) ಕಾಂಡೂಮ್ ಉಪಯೋಗಿಸದೆ ತೊಡಗುವುದು, ಅಥವಾ ಸರಿಯಾಗಿ ಕಾಂಡೂಮ್ ಉಪಯೋಗಿಸದಿರುವುದು.
   - ಮುಖಮೈಥುನ (ಯೋನಿ ಅಥವಾ ಜನನಾಂಗ) ಇವುಗಳನ್ನು ಬಾಯಿ ನಾಲಗೆಯ ಮೂಲಕ ನೆಕ್ಕುವುದು, ಕೆಲವೊಮ್ಮೆ ಅವಗಳಲ್ಲಿ ರಕ್ತ ಸ್ರಾವ, ಹುಣ್ಣು, ವ್ರಣ, ಸೀಳುವಿಕೆಗಳಿದ್ದರೂ ಮತ್ತು ಸ್ತ್ರೀಯರ ಋತುಚಕ್ರದ ರಕ್ತಸ್ರಾವಕಾಲದಲ್ಲಿ ಮುಖಮೈಥುನ ಮಾಡುವುದು.
   - ಸೂಜಿ, ಶಸ್ತ್ರಿಕ್ರಿಯೆಯ ಆಯುಧಗಳು, ಕುಕ್ಕರ್ ಮತ್ತು ಇತರ ಮಾದಕ ವಸ್ತುಗಳನ್ನು ಚುಚ್ಚಿಕೊಳುವ ಸಾಧನಗಳನ್ನು ಹಂಚಿಕೊಳ್ಳುವುದು.
   - ಮಾತೆಯರು ಮಕ್ಕಳಿಗೆ ಗರ್ಭಸ್ಥವಾಗಿರುವಾಗ, ಜನನಕಾಲದಲ್ಲಿ ಮತ್ತು ಮೊಲೆಹಾಲನ್ನು ಕುಡಿಸುವಾಗ ಈ ರೋಗವನ್ನು ಮಗುವಿಗೆ ವರ್ಗಾಯಿಸಬಹುದು.

2. ಹಲವಾರು ಸಂಗಾತಿಗಳ ಸಂಗಡ ಸಂಭೋಗ ಕ್ರಿಯೆಯಲ್ಲಿ ತೊಡಗಿದಾಗ ಹೆಚ್ ಐ ವಿ ಸೋಂಕು ಅಧಿಕವಾಗಿ ಬೇಗಹರಡುವುದು ಮತ್ತು ಇತರ ಗುಪ್ತ ರೋಗಗಳು ಹರಡಬಹುದು ಎಂಬುದನ್ನು ವಿವರಿಸಿ. ಏನೇ ಆದರೂ ಒಬ್ಬರಿಗೆ ಹೆಚ್ ಐ ವಿ ಸೋಂಕಿನ ರೋಗಿಯೊಂದಿಗೆ ಸಂಪರ್ಕ ಇರಿಸಿಕೊಂಡರೂ ಖಂಡಿತ ಅದು ನಿಮಗೆ ಹರಡುವ ಸಾಧ್ಯತೆ ಇದೆ.

3. ಹೆಚ್ ಐ ವಿ ಸೋಂಕನ್ನು ತಡೆಯಲು – ಯೋನಿ ಅಥವಾ ಗುದ ಮೈಥುನದ ಸಮಯದಲ್ಲಿ ಖಂಡಿತ ಪೂರ್ಣಪ್ರಮಾಣದಲ್ಲಿ ನಿರೋಧಕ ಕಾಂಡೂಮ್‌ಗಳನ್ನು ಬಳಸುವ ಬಗ್ಗೆ ವಿವರಿಸಿರಿ ಮುಖಮೈಥುನದಿಂದ ಉಂಟಾಗುವ ಹಾನಿಗಳನ್ನು ಹೇಳಿ ಮತ್ತು ಅದನ್ನು ಇಚ್ಛಿಸಿದಲ್ಲಿ ಆಗಲೂ ಕಾಂಡೂಮ್‌ಗಳನ್ನು ಬಳಸಲು ತಿಳಿಸಿ.

ಕಾಂಡೂಮ್‌ಗಳನ್ನು ಬಳಸುವುದರಿಂದ ಇತರ ಗುಪ್ತರೋಗಗಳನ್ನು ನಿಯಂತ್ರಿಸಬಹುದೆಂದು ಮನವರಿಕೆ ಮಾಡಿಕೊಡಿ.

ಇತರೆ ಯಾವುದೇ ವಿಧಾನವು, ಕಾಂಡೂಮ್ ಉಪಯೋಗಸಹಿತ, ನಿಮಗೆ ಶೇ 100ರಷ್ಟು ರಕ್ಷಣೆ ನೀಡಲಾರದು. ಆ ವಸ್ತುವು ದೋಷಯುಕ್ತವಾಗಿರಲಿ ಅಥವಾ ಸರಿಯಾಗಿ ಬಳಸದಿದ್ದ ಪಕ್ಷದಲ್ಲಿ ಹಾನಿಕಾರಕವಾಗಬಹುದು. ಕಾಂಡೂಮ್ ಅನ್ನು ಸರಿಯಾಗಿ ಉಪಯೋಗಿಸುವ ವಿಧಾನವನ್ನು ಆಪ್ತ ಸಲಹಾ ಕಾರ್ಯದಲ್ಲಿ ವೈಯುಕ್ತಿಕವಾಗಿ ಪ್ರದರ್ಶಿಸಿ ತಿಳಿಸಿ ಅದು ಹೇಗೆ ಕೊನೆಯವರೆಗೂ ಅದೇ ಸ್ಥಿತಿಯಲ್ಲಿರಬೇಕೆಂದು ತಿಳಿಸಿಹೇಳಬೇಕು. ಜಲಾಧಾರಿತ ಲೂಬ್ರಿಕೆಂಟ್‌ಗಳನ್ನು ಉಪಯೊಗಿಸಿ ಸುಲಭವಾಗಿ ಜಾರುವಿಕೆಗೆ ಹೇಗೆ ಅವಕಾಶ ಪಡೆಯಬಹುದು ವಿವರಿಸಿ. ಇಂತಹ ವಿವರಣೆ ನೀಡುವಾಗ ನೈಜವಾಗಿ ಕಾಂಡೂಮ್‌ಗಳನ್ನು ವೈಯುಕ್ತಿಕವಾಗಿ ಧರಿಸಿ ತೋರಿಸಿ ಪ್ರಾತ್ಯಿಕ್ಷಿಕೆಯಲ್ಲಿ ವಿವರಿಸಿಬಹುದಾಗಿದೆ.

ಕಾಂಡೂಮ್‌ಗಳು ಕೆಲವು ಕಾರಣಗಳಿಗೆ ನಾಶ ಹೊಂದಿರಬಹುದು, ಕೆಲವು ಪರಿಸ್ಥಿತಿಯಲ್ಲಿ ಅಪಾಯ ತರಬಹುದು. ಆಪ್ತಸಲಹೆ ನೀಡುವವರು ಕಾಂಡೂಮ್‌ನ ಅವಧಿಯನ್ನು ಗಮನಿಸಬೇಕೆಂದು ಅತಿಯಾದ ಬಿಸಿಯಿಂದ ದೂರವಿರಿಸಬೇಕು, ಮತ್ತು ಪೆಟ್ರೋಲಿಯಂ ಆಧಾರಿತ ಲೂಬ್ರಿಕೆಂಟ್‌ಗಳನ್ನು ಉಪಯೋಗಿಸುವುದನ್ನು ನಿಷೇಧಿಸಬೇಕು. ಏಕೆಂದರೆ ಇದರ ರಾಸಾಯನಿಕ ಕ್ರಿಯೆಯು ಕಾಂಡೂಮ್ ಹಾಳಾಗುವಂತೆ ಮಾಡಬಹುದು. ಲ್ಯಾಟಿಕ್ ಭಾಗವು ಸೀಳುಬಿಟ್ಟು ಹರಿಯಬಹುದು. ಸಲಹೆ ನೀಡುವವರು ಮುಖ್ಯವಾಗಿ ತಿಳಿಸಬೇಕಾದುದು ಏನೆಂದರೆ ಎಂದೆಂದು ಒಮ್ಮೆ ಉಪಯೋಗಿಸಿದ ಕಾಂಡೂಮ್ ಅನ್ನು ಮತ್ತೆ ಉಪಯೋಗಿಸಬೇಡಿ. ವೀರ್ಯ ಚಿಮ್ಮುವ ಕಾಲದಲ್ಲಿ ಜನನಾಂಗವನ್ನು ಹೊರಗೆ ತೆಗೆದುಕೊಂಡರೆ ಅದು ಹಾರಿ ಕಾಂಡೂವಮ್ ಹರಿಯುವ ಸಾಧ್ಯತೆ ಕಡಿಮೆಯಾಗಿ ವೀರ್ಯವು ಒಳಗೆ ಸೋರದಂತೆ ನಿಯಂತ್ರಿಸಬಹುದು. ಉದ್ರೇಕವು ಅಧಿಕವಾಗಿ ವೀರ್ಯ ಚಿಮ್ಮುವಂತಾದಾಗ ಜನನಾಂಗದ ಮಣಿಭಾಗವನು ಗಟ್ಟಿಯಾಗಿ ಅದುಮಿ ಚಿಮ್ಮವಂತೆ ನಿಯಂತ್ರಿಸಿ ಕೇವಲ ಕಾಂಡೂಮ್‌ನಿಲ್ಲಿ ತುಂಬಿಕೊಳ್ಳುವಂತೆ ಮಾಡಬೇಕು. ಇದನ್ನು ಆಪ್ತ ಸಲಹಾಕಾರರು ವಿವರಿಸಿ ಹೇಳಬೇಕು.

**4.** ಮಾದಕ ವಸ್ತುಗಳನ್ನು ಸೇವಿಸುವಾಗ ಚುಚ್ಚಿಕೊಳ್ಳುವಾಗ ಉಪಯೊಗಿಸುವ ಸೂಜಿಯಿಂದ ಹೆಚ್ ಐ ವಿ ಹರಡಬಹುದೆಂದು ಅವರಿಗೆ ಮನವರಿಕೆ ಮಾಡಿ ಕೊಡಿ ಹಾಗು ಮಾದಕ ವಸ್ತುಗಳನ್ನು ಹಾನಿಕಾರಕವೆಂದು ತಿಳಿಹೇಳಿ. ಅಪಾಯವು ಅಧಿಕ ಯಾವಾಗೆಂದರೆ ಉಪಯೋಗಿಸುವ ಸೂಜಿಯನ್ನು ಹಂಚಿಕೊಳ್ಳುವುದರಿಂದ, ಇತರ ಉಪಕರಣಗಳನ್ನು ಸರಿಯಾಗಿ ತೊಳೆಯದೆ ಉಪಯೋಗಿಸುವುದರಿಂದ ಮತ್ತು ಔಸಧಿಗಳಿಂದ, ಸೂಜಿಯನ್ನು ಕೇವಲ ಹತ್ತಿ ಅಥವಾ ನೀರಿನಿಂದ ತೊಳೆದರೆ ಸಾಲದು. ಮಾದಕ ವಸ್ತುವನ್ನು ಚುಚ್ಚಿಕೊಳ್ಳುವ ಸೂಜಿಯನ್ನು ಬ್ಲೀಚ್ ಮಾಡಿ ಪಿಚಕಾರಿಯನ್ನು ನೀರಿನಿಂದ ತೊಳಯಬೇಕು ಎಲ್ಲ ಉಪಕರಣಗಳನ್ನು ಉಪಯೋಗಿಸುವ ಮೊದಲು ಬಿಸಿ ನೀರಿನ ದ್ರಾವಣದಲ್ಲಿ ತೊಳೆದು ಉಪಯೋಗಿಸಬೇಕು.

**ಈ. ಬಂದಿರುವವರಿಂದ ಹೆಚ್ ಐ ವಿ / ಏಯ್ಡ್ಸ್ ಬಗ್ಗೆ ಅವರ ಅರಿವನ್ನು ತಿಳಿದುಕೊಳ್ಳಬೇಕು ಆ ನಂತರ ಸಾಂತ್ವನಯುತವಾದ ತೀರ್ಪಿಲ್ಲದಂತಹ ವಾತಾವರಣ ಸೃಷ್ಟಿಸಿ ಅವರು ಆರಾಮವಾಗಿ ಚರ್ಚಿಸಲು ಅವಕಾಶಮಾಡಿಕೊಡಬೇಕು.**

ಅವರು ಈ ಹಿಂದೆ ಹೆಚ್ ಐ ವಿ ಆಪ್ತಸಲಹೆ ಅಥವಾ ಪರೀಕ್ಷೆಗೆ ಒಳಪಟ್ಟಿದ್ದರ ವಿವರ ಕೇಳಿ

1. ಅವರಿಗೆ ಈಗಾಗಲೇ ಪರೀಕ್ಷೆ ನಡೆಯದಿದ್ದಲ್ಲಿ, ಹೆಚ್ ಐ ವಿ ಹರಡುವಿಕೆ ಮತ್ತು ನಿಯಂತ್ರಣದ ಕುರಿತಾಗಿ ಚರ್ಚೆ ಮುಂದುವರೆಸಿರಿ.
2. ಅನಾಮಿಕವಾಗಿ ಹೆಚ್ ಐ ವಿ ಪರೀಕ್ಷೆ ಮಾಡಿಸಿಕೊಳ್ಳಬಹುದೆಂದು ತಿಳಿಸಿ ಹೇಳಿ ಮತ್ತು ಅದರ ಗೋಪನೀಯತೆ ಬಗ್ಗೆ ಮತ್ತು ಗೌಪ್ಯವಾದ ಆಪ್ತ ಸಲಹಾ ಕಾರ್ಯ ಮತ್ತು ಪರೀಕ್ಷೆಯ ವ್ಯತ್ಯಾಸ ಸಂಬಂಧಗಳನ್ನು ವಿವರಿಸಿ.
3. ಅವರು ಪರೀಕ್ಷಿಸಲ್ಪಟ್ಟು ಅದು ನೆಗೆಟಿವ್ ಎಂದು ಕಂಡು ಬಂದಲ್ಲಿ ಭವಿಷ್ಯದಲ್ಲಿ ಹಾನಿಕಾರಕ ಎಂಬುದು ಖಚಿತವಾದಾಗ ಆಪ್ತ ಸಲಹಾ ಕಾರ್ಯವನ್ನು ಮುಂದುವರೆಸಿ ಮತ್ತು ಹೆಚ್ ಐ ವಿ ಪರೀಕ್ಷೆಯನ್ನು ಪುನರಾವರ್ತಿಸಿ. ಆರು ತಿಂಗಳ ಹಿಂದೆ ಪರೀಕ್ಷೆ ಮಾಡಲ್ಪಟ್ಟಿದಲ್ಲಿ ಮತ್ತು ಇದರಿಂದ ಹಾನಿಕಾರಕ ಸೂಚನೆ ಕಂಡಿರದಿದ್ದಲ್ಲಿ ಅವರಿಗೆ ಮತ್ತೊಮ್ಮೆ ಆಪ್ತಸಲಹೆಗೆ ಬರಲು ಹೇಳಿ ಮತ್ತು ಪರೀಕ್ಷೆಗೆ ಇಚ್ಛಿಸಿದಲ್ಲಿ ಮಾಡಿಸಿಕೊಳ್ಳಲು ಹೇಳಿ.
4. ಅವರು ಪರೀಕ್ಷೆಯ ನಂತರ ಅದು ಪಾಸಿಟಿವ್ ಎಂಬುದು ನಿರ್ಧಾರವಾದಲ್ಲಿ, ಅವರು ಸೂಕ್ತ ವೈದ್ಯಕೀಯ ರಕ್ಷಣೆ, ಸಹಾಯ, ಸೇವೆ ಪಡೆಯುತ್ತಿರುವರೆ ಎಂಬುದನ್ನು ಖಚಿತ ಪಡಿಸಿಕೊಳ್ಳಿ ಹಾಗೇನಾದರೂ ಅವರ ಪಡೆಯದಿದ್ದಲ್ಲಿ ಹತ್ತಿರದ ನಗರದಲ್ಲಿ ಸಧ್ಯದ ಪರಿಸ್ಥಿತಿಯಲ್ಲಿ ಸಿಗುವ ಸೌಲಭ್ಯಗಳನ್ನು ಪಡೆಯಲುಹೇಳಿ ಅವರಿಗೆ ಸಹಾಯ ಸಹಕಾರ ಸಿಗುವಂತಹ ಸೇವಾ ಸಂಸ್ಥೆಗಳಿಗೆ ಕಳಿಸಿ ಮತ್ತು ಸ್ವಸಹಾಯ ಗುಂಪುಗಳನ್ನು ಪರಿಚಯಮಾಡಿಸಿ.

   ಲೈಂಗಿಕ ಸಂಬಂಧಗಳ ವಿಷಯದಲ್ಲಿ ಹೆಚ್ ಐ ವಿ ಸೋಂಕನ್ನು ಹೊಂದಿರುವವರು ಸೂಜಿಯನ್ನು ಹಂಚಿಕೊಂಡಲ್ಲಿ ಅದು ಎಲ್ಲ ಸಂಗಾತಿಗಳಿಗೂ ಅಧಿಕವಾಗಿ ಹರಡುವುದು ಖಂಡಿತವಾಗಿದೆ ಹೆಚ್ ಐ ವಿ ಸೋಂಕಿನ ವ್ಯಕ್ತಿಯನ್ನು ಬಾಹ್ಯರೂಪ ಗುಣಗಳಿಂದ ಅರಯಲು ಅಸಾಧ್ಯವಾದ ಕಾರಣ, ಸೂಜಿ ಅಥವಾ ಇತರ ಕಾರ್ಯಗಳನ್ನು ಯಾರೊಡನೆಯೂ ಹರಚಿಕೊಳ್ಳುವುದು ಅಪಾಯಕಾರಿಯಾಗಿದೆ.

5. ಹೆಚ್ ಐ ವಿ ಸೋಂಕು ಸಹಜ ಸಂಪರ್ಕಗಳಾದುವುಗಳಿಂದ ಈ ಕೆಳಗಿನ ಕಾರ್ಯಗಳಲ್ಲಿ ಹರಡುವುದಿಲ್ಲ ಎಂಬುದನ್ನು ಅವರಿಗೆ ವಿವರಿಸಿ ಹೇಳಿ :
   - ಹಸ್ತ ಕುಲಕುವುದರಿಂದ.
   - ಒಂದೇ ತಟ್ಟೆ ಲೋಟ ಉಪಯೋಗಿಸಿ ತಿಂದು ಕುಡಿಯುವುದು.

- ಸೀನುವುದು, ಕೆಮ್ಮುವುದು.
- ಸಾರ್ವಜನಿಕ ಮೂತ್ರಾಲಯ ಉಪಯೋಗಿಸುವುದು.
- ಸೋಂಕಿನ ವ್ಯಕ್ತಿಯೊಡನೆ ಅಕ್ಕಪಕ್ಕದಲ್ಲಿ ಇರುವುದ.

ಕಣ್ಣೀರು, ಬಾಯಿನ ಲಾಲರಸ ಮತ್ತು ಮೂತ್ರಗಳನ್ನು ಹೊರತು ಪಡಿಸಿ, ಹೆಚ್ ಐ ವಿ ಸೋಂಕು ಬೇರೆಲ್ಲ ದೇಹದಿಂದ ಸ್ರವಿಸುವ ದ್ರವಗಳಿಂದ ಉಂಟಾಗುವ ಸಾಧ್ಯತೆಗಳಿವೆ.

ಒಣಗಿದ ಚುಂಬನ - ಬಾಯಿಯಲ್ಲಿ ಯಾವುದೇ ರೀತಿಯ ಹುಣ್ಣು ಗಾಯಗಳು ಇಲ್ಲದಿದ್ದಲ್ಲಿ - ಸುರಕ್ಷಿತವೆಂದು ಹೇಳಲಾಗಿದೆ. ಆಳವಾದ ಚುಂಬನ ಆದರಲ್ಲೂ ಬಾಯಲ್ಲಿ ಹುಣ್ಣು, ರಚನಾ ವಿಧಾನದಲ್ಲಿ ಉಂಟಾದ ತೊಂದರೆ, ರಕ್ತ ಸೋರುವಿಕೆ ಹಲ್ಲು, ಬಾಯಿ, ದವಡೆಗಳಿಂದ ಇದ್ದಲ್ಲಿ ಸ್ವಲ್ಪಹಾನಿಯುಂಟಾಗಬಹುದು. ರಕ್ತ ಸೋರುವಿಕೆಯು ಇದೆಯೆ ಎನ್ನುವುದು ತಿಳಿಯುವುದು ಬಹಳ ಕಷ್ಟಕರವಾದ ಕೆಲಸ. (ಉದಾಹರಣೆಗೆ ಹಲ್ಲನ್ನು ಬ್ರಷ್‌ನಿಂದ ಉಜ್ಜುವಾಗಲೂ ವಸಡಿನಿಂದ ರಕ್ತ ಹರಿಯಬಹದು)

ಆಪ್ತ ಸಲಹಾಕಾರ್ಯದಲ್ಲಿ ಈ ಸಹಜ ಸಂಪರ್ಕಗಳಿಂದ ಯಾವುದೇ ವಿಧವಾದ ಸೋಂಕಿನ ಹರಡುವಿಕೆ ಆಗುವುದಿಲ್ಲವೆಂದು ಮನವರಿಕೆ ಮಾಡಿಕೊಡಬೇಕು.

## 3. ಹೆಚ್ ಐ ವಿ ಪರೀಕ್ಷೆ ಕುರಿತಾಗಿ ಚರ್ಚಿಸುವುದು

### ಅ. ಸಲಹೆ ಪಡೆಯಲು ಬಂದವರಿಗೆ ವಿವರಿಸಬೇಕಾದುದು :

ಏನೆಂದರೆ ಯಾರು ಕ್ರಿಯಾತ್ಮಕವಾಗಿ ಲೈಂಗಿಕ ಕ್ರಿಯೆಯಲ್ಲಿ ತೊಡಗಿರುವರು ಅಥವಾ ಮಾದಕ ವಸ್ತುಗಳ ಸೇವನೆಯಲ್ಲಿ ಸೂಜಿಯನ್ನು ಹಂಚಿಕೊಳ್ಳುವರೊ ಅಂತಹವರಿಗೆ ಹೆಚ್ ಐ ವಿ ಪರೀಕ್ಷೆ ಮಾಡಿಸಿಕೊಳ್ಳುವುದು ಅವಶ್ಯವೆಂದು ಹೇಳಿ ಪ್ರೋತ್ಸಾಹಿಸಬೇಕು. ಹೆಚ್ ಐ ವಿ ಆಂಟಿಬಾಡಿ ಪರೀಕ್ಷೆ ಒಂದೇ ವ್ಯಕ್ತಿಯು ಸೋಂಕಿಗೆ ಗುರಿಯಾಗಿರುವುದನ್ನು ಖಚಿತ ಪಡಿಸುವುದು. ಜೊತೆಗೆ ವೈಯುಕ್ತಿಕ ಮತ್ತು ವೈದ್ಯಕೀಯ ಲಾಭಗಳು ಹೆಚ್ ಐ ವಿ ಆಂಟಿಬಾಡಿ ಪರೀಕ್ಷೆಯ ಫಲಿತಾಂಶದಿಂದ ಇದೆ.

### ಆ. ಪರೀಕ್ಷೆಯಿಂದ ಉಂಟಾಗುವ ಲಾಭಗಳನ್ನು ಸಲಹೆಗೆ ಬಂದವರಿಗೆ ವಿವರಿಸಿ :

1. ಪರೀಕ್ಷೆಯಲ್ಲಿ ನೆಗೆಟಿವ್ ಎಂದಿದ್ದು, ಪರೀಕ್ಷಿಸಲ್ಪಟ್ಟವರು ಆರು ತಿಂಗಳಿಂದ ಯಾವುದೇ ಬಗೆಯ ಅಪಾಯಕಾರಿ ನಡವಳಿಕೆಯಲ್ಲಿ ತೊಡಗಿರದಿದ್ದಲ್ಲಿ ಅವರು ಹೆಚ್ ಐ ವಿ ಸೋಂಕಿಗೆ ಗುರಿಯಾಗಿಲ್ಲವೆಂದು ಸಮಾಧಾನಕರವಾಗಿ ತಿಳಿಸಬಹುದು. ಅವಶ್ಯಕತೆ ಇದ್ದಲ್ಲಿ ಪುನಃ ಪರೀಕ್ಷೆ ಹೊಂದಲು ಹೇಳಬಹುದು.

2. ಸೊಂಕು ತಗುಲದಿದ್ದಲ್ಲಿ ಆ ವ್ಯಕ್ತಿಯು ಮುಂದಿನ ಸಂಪರ್ಕಗಳಲ್ಲಿ ಜಾಗರೂಕತೆ ವಹಿಸಿ ಸೋಂಕನ್ನು ನಿಯಂತ್ರಿಸುವ ವಿಧಾನಗಳನ್ನು ಅಳವಡಿಸಿಕೊಂಡು. ಮೂಲ ನಿಯಮಗಳನ್ನು ಅನುಸರಿಸಬೇಕು. (ಸೋಂಕು ಹರಡುವ ಹಾದಿಗಳನ್ನು ಮೊದಲೇ ತಿಳಿದು ಅದನ್ನು ತಡೆಗಟ್ಟುವ ಬಗ್ಗೆ ಅರಿಯಬೇಕು)

3. ಅವರ ಪರೀಕ್ಷೆಯು ಪಾಸಿಟಿವ್ ಎಂದು ದಾಖಲಾದ ಪಕ್ಷದಲ್ಲಿ ಅವರಿಗೆ ಹೆಚ್ ಐ ವಿ ಸೋಂಕು ಇರುವುದು ಖಚಿತವಾದಂತೆ. ಇಲ್ಲಿ ನೀವು ಗಮನಿಸಬೇಕಾದ ವಿಷಯವೆಂದರೆ ಸೋಂಕಿನ ಕುರಿತು ಅರಿತನಂತರ ಅದಕ್ಕೆ ಬೇಕಾದ ಸಹಾಯ, ವೈದ್ಯಕೀಯ ಮೌಲ್ಯಮಾಪನ, ಸೂಕ್ತ ಉಪಚಾರ ವಿಧಾನ (ಹತ್ತಿರದಲ್ಲಿ ಇರುವ ಆಸ್ಪತ್ರೆಗಳಿಂದ ಪಡೆಯುವುದು) ಮತ್ತು ಯೋಗ್ಯ ಸ್ವಾಸ್ಥ್ಯ ಜೀವನ ಯೋಜನೆಯನ್ನು ನಿರೂಪಿಸಿಕೊಳ್ಳುವುದು.

**4. ಅಂತಹ ವ್ಯಕ್ತಿಯು ವಿವಾಹಿತನಾಗಿದ್ದಲ್ಲಿ ಆಕೆ ಗರ್ಭಧರಿಸಿದ್ದಲ್ಲಿ ಅಥವಾ ಅವರಿಗೆ ಮಕ್ಕಳು ಇದ್ದಲ್ಲಿ :**

ಆ ಮಕ್ಕಳಿಗೆ ವಿಷೇಶ ರೀತಿಯ ವೈದ್ಯಕೀಯ ರಕ್ಷಣೆ ಪರೀಕ್ಷೆಗಳ ಅಗತ್ಯ

- ಆಗಾಗ ವೈದ್ಯಕೀಯ ಪರೀಕ್ಷೆಗಳನ್ನು ಮಾಡಿಸಿ ದವಾಖನೆಯ ಮೌಲ್ಯಮಾಪನ ಪಡೆದು ಅವರಿಗೆ ಹೆಚ್ ಐ ವಿ ಸೋಂಕು ಉಂಟಾಗಿದೆಯ ಎಂಬುದನ್ನು ತಿಳಿಯಬೇಕು.
- ವಿಷೇಶ ಬಗೆಯ ರೋಗ ನಿರೋಧಕಗಳನ್ನು (ಉದಾ : ಇನ್ ಆಕ್ಟಿವೇಟೆಡ್ ಪೋಲಿಯೊ ಲಸಿಕೆ) ಹೆಚ್ ಐ ವಿ ಆಂಟಿಬಾಡಿ ಪಾಸಿಟಿವ್ ಆಗಿದ್ದು ಅಥವಾ ಸೋಂಕು ತಗುಲಿದ್ದಲ್ಲಿ ನೀಡಬೇಕು.
- ಸೋಂಕಿಗೆ ಗುರಿಯಾಗಿದ್ದಲ್ಲಿ ನಿಯಮಿತವಾಗಿ ಪರೀಕ್ಷೆ ಉಸ್ತುವಾರಿ ಮತ್ತು ಅವಶ್ಯವಿದ್ದಲ್ಲಿ ಸೂಕ್ತ ವೈದ್ಯಕೀಯ ಔಷಧೋಪಚಾರಗಳನ್ನು ನೀಡಬೇಕು.

**ಇ. ಪರೀಕ್ಷೆಯ ಪಲಿತಾಂಶಗಳನ್ನು ಆ ವ್ಯಕ್ತಿಯು ಯಾವರೀತಿ ಸ್ವೀಕರಿಸುತ್ತಾನೆ – ಮಾನಸೀಕ, ಭಾವನಾತ್ಮಕ ನಡವಳಿಕೆಗಳ ವಿಮರ್ಷೆ ಮಾಡಬೇಕು.**

ಅವರಿಗೆ ಹೆಚ್ ಐ ವಿ ಪರೀಕ್ಷೆಯ ಫಲಿತಾಂಶದ ಬಗ್ಗೆ ಗಾಭರಿ ಭೀತಿ ಉಂಟಾಗುವುದು ಸಹಜವೆಂದು ಮನವರಿಕೆ ಮಾಡಿಕೊಡಿ ಸಲಹೆಗಾರರಾಗಿ ನೀವು ಅವರಿಗೆ ಎಲ್ಲ ಬಗೆಯ ಸಹಕಾರ ಮತ್ತು ಸಾಂತ್ವನ ನೀಡುವಿರೆಂದು ಅವರಿಗೆ ಮನದಟ್ಟುಮಾಡಿ.

**ಈ. ಹೆಚ್ ಐ ವಿ ಆಂಟಿಬಾಡಿ ಪರೀಕ್ಷೆ ಮತ್ತು ಕಾರ್ಯ ವಿಧಾನ :**

1. ಹೆಚ್ ಐ ವಿ ಆಂಟಿಬಾಡಿ ಪರೀಕ್ಷೆಯೆಂದರೆ ಅದು ಒಂದುರೀತಿಯ ರಕ್ತದ ಪರೀಕ್ಷೆ ಎಂದು ವಿವರಿಸಿ ಈ ಪರೀಕ್ಷೆಯಿಂದ ಕೇವಲ ಆ ವ್ಯಕ್ತಿಯು ಹೆಚ್ ಐ ವಿ ಸೊಂಕಿಗೆ ಒಳಗಾಗಿರುವುದೆ ಇಲ್ಲವೇ

ಎಂಬುದಷ್ಟೇ ತಿಳಿಯುತ್ತದೆ. ಅವನಿಗೆ ಏಯ್ಡ್ಸ್ ಇರುವುದರ ಬಗೆಗೆ ಅಲ್ಲ. ಏಯ್ಡ್ಸ್ ಇರುವ ಬಗ್ಗೆ ಯಾವುದೇ ರೀತಿಯ ರಕ್ತ ಪರೀಕ್ಷೆಯಿಂದಲೂ ಕಂಡು ಹಿಡಿಯಲಾಗದು.

2. ಸಲಹೆ ಪಡೆಯಲು ಬಂದವರಿಗೆ ಈ ರಕ್ತದ ಪರೀಕ್ಷೆಯ ಫಲಿತಾಂಶವನ್ನು ಅರಿಯಲು ಮೂರುವಾರ ಕಾಯಬೇಕೆಂಬುದನ್ನು ತಿಳಿಸಿರಿ. ಈ ಫಲಿತಾಂಶವನ್ನು ನಂತರದ ಆಪ್ತ ಸಲಹಾ ಚರ್ಚೆಯಲ್ಲಿ ತಿಳಿಸಲಾಗುವುದು ಮತ್ತು ವೈಯುಕ್ತಿಕವಾಗಿ ನೀಡಲಾಗುವುದು ಎಂಬುದನ್ನು ಖಚಿತ ಪಡಿಸಿರಿ.

## 4. ಹೆಚ್ ಐ ವಿ ಆಪ್ತ ಸಲಹೆ ಮತ್ತು ಪರೀಕ್ಷೆಯ ಆಯ್ಕೆ

ಅನಾಮಿಕ ಮತ್ತು ರಹಸ್ಯಾತ್ಮಕ ಆಪ್ತ ಸಲಹೆ ಮತ್ತು ಪರೀಕ್ಷೆ ಇವುಗಳ ವ್ಯತ್ಯಾಸಗಳನ್ನು ಅವರಿಗೆ ವಿವರಿಸಿ

1. ರಹಸ್ಯಾತ್ಮಕ / ಗೋಪನೀಯ : ರಹಸ್ಯವಾಗಿ ಆಪ್ತ ಸಲಹಾಕಾರ್ಯ ಮತ್ತು ಪರೀಕ್ಷೆ ನಡೆಸುವುದರಿಂದ ವೈದ್ಯಕೀಯ ರಕ್ಷಣೆ ಮತ್ತು ಉಪಚಾರಗಳನ್ನು ಸೇವೆಗಳನ್ನು ಸುಲಭವಾಗಿ ನೀಡಬಹುದು. ಹೆಚ್ ಐ ವಿ ಕುರಿತಾಗಿ ಆಪ್ತ ಸಲಹೆ ಮತ್ತು ಪರೀಕ್ಷಾವಿವರ, ಅದರ ಫಲಿತಾಂಶ ಇವುಗಳೆಲ್ಲವನ್ನು ರೋಗಿಯ ವೈದ್ಯಕೀಯ ತಾಪಸಣಾದಾಖಲೆಯಲ್ಲಿ ನಮೂದಿಸಬಹುದು. ರಕ್ತದ ಪರೀಕ್ಷೆ ಅವುಗಳ ಫಲಿತಾಂಶಗಳನ್ನು ಪ್ರಯೋಗಾಲಯಕ್ಕೆ ಕಳಿಸಿ ಪಡೆಯುವುದು ಎಲ್ಲವನ್ನು ಕೋಡ್ ಸಂಖ್ಯೆಯಲ್ಲಿ ಮಾಡಲಾಗುತ್ತದೆ. ಹೆಸರನ್ನು ಸೂಚಿಸಲಾಗುವುದಿಲ್ಲ.

2. ಅನಾಮಿಕ : ಯಾವುದೇ ಸಂಧರ್ಭದಲ್ಲೂ ವೈಯುಕ್ತಿಕವಾಗಿ ಗುರುತಿಸಲ್ಪಡುವ ಪ್ರಶ್ನೆಗಳನ್ನು ಕೇಳಲಾಗುವುದಿಲ್ಲ. ದಾಖಲೆಯ ಮತ್ತು ರಕ್ತದ ನಮೂನೇ ಮಾದರಿಗಳನ್ನು ಕೋಡ್ ನಂಬರ್ ಮೂಲಕ ಗುರುತಿಸಲಾಗುವುದು.

## 5. ಪಕ್ಷಪಾತ :

ಸಲಹೆ ಪಡೆಯಲು ಬಂದವರಿಗೆ ಯಾವುದೇ ಕಾರಣಕ್ಕೂ ತಾವು ಹೆಚ್ ಐ ವಿ ಪರೀಕ್ಷೆಗೆ ಒಳಪಟ್ಟಿರುವ ವಿಷಯವನ್ನು ಯಾರಿಗೂ ಹೇಳಬಾರದೆಂದು ತಿಳಿಸಿಹೇಳಿರಿ. ಇಂತಹ ವಿಷಯಗಳ ಹೊರಗೆಡುವುದುರಿಂದ ಬೇದ ಭಾವಗಳು ತಲೆದೋರಿ ಪಕ್ಷಪಾತ ತೋರಬಹುದು. ಇಂತಹ ವಿಷಯಗಳು ಸಾರ್ವಜನಿಕವಾಗುವುದರಿಂದ ಕೆಲಸದಿಂದ ಹೊರಹಾಕಬಹುದು ಮತ್ತೆ ವಸತಿ ಹೀನರಾಗಬಹುದು ಅಥವಾ ಯಾವುದೇ ರೀತಿಯ ಕೌಟುಂಬಿಕ ತಾಪತ್ರಯ ವಿರೋಧಭಾವನೆಗಳು ಉದ್ಭವಿಸಬಹುದು.

**ಪರೀಕ್ಷೆಯನಂತರದ ಆಪ್ತ ಸಲಹಾ ಕಾರ್ಯಕ್ರಮ :**

**1. ಪರೀಕ್ಷೆಯ ಫಲಿತಾಂಶ :**

ರೋಗಿಯು ಸ್ವತಃ ಹೆಚ್ ಐ ವಿ ಆಂಟಿಬಾಡಿ ಪರೀಕ್ಷೆಯ ಫಲಿತಾಂಶವನ್ನು ಖುದ್ದಾಗಿ ಪಡೆಯುವುದು.

ಅ. ಪರೀಕ್ಷಾನಂತರದ ಆಪ್ತ ಸಲಹಾ ಕಾರ್ಯವನ್ನು ಫಲಿತಾಂಶ ನೀಡುವುದರಿಂದ ಆರಂಭಿಸಿರಿ

ಆ. ರೋಗಿಗೆ ಪ್ರಯೋಗಾಲಯದ ಚೀಟಿಯಲ್ಲಿ ಪರೀಕ್ಷೆಯ ಫಲಿತಾಂಶವನ್ನು ತೋರಿಸಿರಿ

ಇ. ರೋಗಿಗೆ ಫಲಿತಾಂಶ ನೋಡಿದ ಮೇಲೆ ಯಾವ ರೀತಿಯ ಪ್ರತಿಕ್ರಿಯ ನೀಡುತ್ತಾರೆ ಎಂಬುದನ್ನು ತಿಳಿಯಿರಿ ಮತ್ತು ಅವರ ಭಾವನೆಗಳಿಗೆ ಪ್ರೋತ್ಸಾಹದಾಯಕ ಸಾಂತ್ವನ ನುಡಿಗಳನ್ನು ಹೇಳಿರಿ

ಈ. ರೋಗಿಯು ತಕ್ಷಣ ಕೈಗೊಳ್ಳಬೇಕಾದ ಕಾರ್ಯದ ಬಗ್ಗೆ ವಿವರ ನೀಡಿರಿ.

**2. ಪರೀಕ್ಷೆಯ ಫಲಿತಾಂಶ ನೆಗೆಟಿವ್ ಎಂಬುದರ ಅರ್ಥ :**

ಹೆಚ್ ಐ ವಿ ಪರೀಕ್ಷೆಯ ಫಲಿತಾಂಶವು ನೆಗೆಟಿವ್ ಎಂದು ಬಂದಲ್ಲಿ ಸದಾಕಾಲ ಸಾಮಾನ್ಯವಾಗಿ ಪೂರ್ಣವಾಗಿ ಅರ್ಥವಾಗುವುದೆಂದರೆ ಆ ರೋಗಿಯು ಸೋಂಕಿಗೆ ಬಲಿಯಾಗಿಲ್ಲವೆಂದು ಇದನ್ನು ವಿವರಿಸಿರಿ.

ಅ. ಕಳೆದ ಆರು ತಿಂಗಳಲ್ಲಿ ರೋಗಿಯು ಅಪಾಯಕಾರಿ ನಡವಳಿಕೆಯಲ್ಲಿ ತೊಡಗದಿದ್ದಲ್ಲಿ ಅವರಿಗೆ ಹೆಚ್ ಐ ವಿ ಸೋಂಕು ಆಗಿಲ್ಲವೆಂದು ತಿಳಿದುಬುರುತ್ತದೆ ಅಥವಾ ಹೆಚ್ ಐ ವಿ ಸೋಂಕಿನ ರೋಗಿಯೊಡನೆ ಸಂಪರ್ಕವಿದ್ದರೂ ಸಹ ಇವರಿಗೆ ಆ ಸೋಂಕು ಆಗಿಲ್ಲವೆಂದು ಖಚಿತವಾಗುತ್ತದೆ.

ಆ. ರೋಗಿಯು ಕಳೆದ ಆರು ತಿಂಗಳಿನಲ್ಲಿ ತಮ್ಮ ಹಾನಿಕಾರಕ ಚಟುವಟಿಕೆಯಿಂದಾಗಿ ಸಂಪರ್ಕ ಹೊಂದಿದ್ದು ಆವರಿಗೆ ಹೆಚ್ ಐ ವಿ ಸೋಂಕು ತಗುಲಿದ್ದರೂ ಸಹ ಆವರಲ್ಲಿ ಆಂಟಿಬಾಡಿಗಳು ಉತ್ಪತ್ತಿಯಾಗಿರದೇ ಹೋಗಿರಬಹುದು. ಆಂಟಿಬಾಡಿಗಳು ಸೋಂಕಿನ ಆರರಿಂದ ಹನ್ನೆರಡು ವಾರಗಳಲ್ಲಿ ಉತ್ಪತ್ತಿಯಾಗುತ್ತದೆ. ಕೆಲವರಿಗೆ ಇನ್ನೂ ಅಧಿಕ ಸಮಯ ಆರು ತಿಂಗಳಿಗಿಂತ ಹೆಚ್ಚು ಕಾಲ ತೆಗೆದುಕೊಳ್ಳಬಹುದು ಮತ್ತು ಅತಿಕಡಿಮೆ ಸಂಖ್ಯೆಯ ಜನರಿಗೆ ಸೋಂಕಿನ ನಂತರವೂ ಹೆಚ್ ಐ ವಿ ಗೆ ಆಂಟಿಬಾಡಿಗಳು ಉತ್ಪತ್ತಿಆಗದೇ ಇರಬಹುದು. ರೋಗಿಯ ಅಪಾಯದ ಚರಿತ್ರೆಯನ್ನು ಕೂಲಂಕುಶವಾಗಿ ಪರೀಕ್ಷಿಸಿ ಬೇಕಿದಲ್ಲಿ ಪುನಃ ಹೆಚ್ ಐ ವಿ ಆಂಟಿಬಾಡಿ ಪರೀಕ್ಷೆಗೆ ಒಳಗಾಗಲು ಚರ್ಚಿಸಿ ಹೇಳಬಹುದು.

ಇ. ಪರೀಕ್ಷೆ ಫಲಿತಾಂಶವು ನೆಗೆಟಿವ್ ಎಂದಾಕ್ಷಣ ರೋಗಿಯು ಸೋಂಕಿಗೆ ರೋಗನಿರೋಧನಿಂದಲ್ಲ ಹೆಚ್ ಐ ವಿ ಗೆ ತೆರೆಯಲ್ಪಟ್ಟವನು ಯಾವಾಗಲೂ ಸೋಂಕಿನ ಅಪಾಯಕ್ಕೆ ಒಳಗಾಗುವ ಸಾಧ್ಯತೆ ಇದೆ.

## 3. ಹಾನಿಯನ್ನು ತಗ್ಗಿಸುವಿಕೆ / ಕಡಿಮೆಮಾಡುವುದು

ರೋಗಿಗೆ ನೆಗೆಟಿವ್ ಫಲಿತಾಂಶದಿಂದ ಉಂಟಾಗುವ ವೈಯುಕ್ತಿಕ ಹಾನಿಯನ್ನು ಅರ್ಥಮಾಡಿಕೊಳ್ಳುವಂತೆ ವಿವರಿಸಿ

### ಅ. ಲೈಂಗಿಕ ಹಾನಿಕಾರಕ ನಡವಳಿಕೆ

ಸಾಧ್ಯವಾದಲ್ಲಿ ರೋಗಿಯೆ ಸಂಗಾತಿಗಳಿಗೂ ಹಾನಿಯನ್ನು ಕಡಿಮೆ ಮಾಡಿಕೊಳ್ಳುವ ಬಗ್ಗೆ ಆಪ್ತಸಲಹಾ ಕಾರ್ಯಕ್ರಮವನ್ನು ಏರ್ಪಡಿಸಿ ಸೂಕ್ತ ಸಲಹೆ, ವಿವರ ನೀಡಬಹುದು. ಸಂಗಾತಿಗಳ ಲೈಂಗಿಕ ಅಥವಾ ಮಾಧಕ ವಸ್ತು ಸೇವನೆಯ ವಿವರಗಳನ್ನು ಸರಿಯಾದ ರೀತಿಯಲ್ಲಿ ಖಚಿತವಾಗಿ ಪಡೆಯಲಾಗದು. ಆದಕಾರಣ ರೋಗಿಗಳಿಗೆ ಆಪ್ತ ಸಲಹಾಕಾರ್ಯದಲ್ಲಿ ಮೊದಲೇ ತಿಳಿಸ ಬೇಕಾದುದು ಏನೆಂದರೆ ಕಾಂಡೂಮ್ ಉಪಯೋಗಿಸದೆ ಯಾವುದೇ ರೀತಿಯ ಲೈಂಗಿಕ ಕ್ರಿಯೆಯನ್ನು ಮಾಡಬಾರದು ಅದರಲ್ಲೂ ಸಂಗಾತಿಯ ನಡವಳಿಕೆ ಪುರಾತನ ಚರಿತ್ರೆ ಮತ್ತು ಹೆಚ್ ಐ ವಿ ವಿವರಗಳನ್ನು ಅರಿಯದೆ ಇರುವುದರಿಂದ ಎಚ್ಚರವಹಿಸಬೇಕು. ಇಬ್ಬರೂ ಹೆಚ್ ಐ ವಿ ಪರೀಕ್ಷೆಗೆ ಒಳಪಟ್ಟು ಇಬ್ಬರ ಫಲಿತಾಂಶವು ನೆಗಟಿವ್ ಅಗಿದ್ದ ಪಕ್ಷದಲ್ಲಿ ಮತ್ತು ಹಾನಿಕರಕ ನಡವಳಿಕೆ ಇದ್ದ ಪಕ್ಷದಲ್ಲಿ ಅವರು ಸುಲಭವಾಗಿ ಆತಂಕವಿಲ್ಲದೆ ಕೂಡಬಹುದು.

ಜನರು ಅಪಾಯವನ್ನು ಹೇಗೆ ಪಡೆಯುತ್ತಾರೆ, ಲೈಂಗಿಕ ನಡವಳಿಕೆಯು ಹೇಗೆ ಹಾನಿಕಾರಕವಾಗಬಹುದು ಎಂಬುದನ್ನು ತಿಳಿಹೇಳಿ (ಅವರು ತಮ್ಮ ಸಂಗಾತಿಗಳ ಅಪಾಯಕಾರಿ ಚರಿತ್ರೆಯ ಬಗ್ಗೆ ಹೆಚ್ ಐ ವಿ ಸೋಂಕಿನ ಬಗ್ಗೆ ಅರಿತಿರುವುದಿಲ್ಲ). ಅತ್ಯಂತ ಅಪಾಯಕಾರಿ ಮತ್ತು ಕಡಿಮೆ ಹಾನಿಯ ವಿವರಗಳನ್ನು ತಿಳಿಸಿ.

1. ಪುರುಷರು ಲೈಂಗಿಕ ಕ್ರಿಯೆಯಲ್ಲಿ ಗುದ ಮೈಥುನದ ಸಮಯದಲ್ಲಿ ಕಾಂಡೂಮ್‌ನ ಬಳಕೆ.
2. ಯೋನಿ ಮೈಥುನದಲ್ಲಿ ಕಾಂಡೂಮ್‌ಗಳನ್ನು ಬಳಸುವುದು.
3. ಜನನಾಂಗವನ್ನು ಮುಖಮೈಥುನದಲ್ಲಿ ಹೀರುವುದು ಜನನಾಂಗದ ಸುತ್ತ ಗಾಯ, ಹುಣ್ಣು, ರಕ್ತ ಸ್ರಾವ ಇದ್ದಲ್ಲಿ ಮಾಡದಿರುವುದು.
4. ಯೋನಿಯನ್ನು ಮುಖ ಮೈಥುನದಲ್ಲಿ ಭೋಗಿಸುವುದು ಅದರ ಸುತ್ತ ರಕ್ತ ಸೋರುವಿಕೆ, ಹುಣ್ಣು ಗಾಯವಿದ್ದಲ್ಲಿ, ಋತುಚಕ್ರದ ರಕ್ತ ಸ್ರಾವದಲ್ಲಿ ಮಾಡಬಾರದು.

## ಆ. ಮಾದಕ ವಸ್ತುವಿನ ಉಪಯೋಗ – ಅಪಾಯಕಾರಿ ನಡವಳಿಕೆ :

ಸೂಜಿಯ ಮೂಲಕ ಮಾಧಕ ವಸ್ತುಗಳನ್ನು ನರಗಳಿಗೆ ಚುಚ್ಚಿಕೊಳ್ಳುವವರ ನಡವಳಿಕೆಯ ಬಗ್ಗೆ ಚರ್ಚಿಸಬೇಕಾದುದು ಆಪ್ತಸಲಹಾಕಾರ್ಯದಲ್ಲಿ ಸೂಕ್ತವಾದುದು. ಏಕೆಂದರೆ ಅಂತಹ ರೋಗಿಗಳು ಮಾದಕ ವಸ್ತುಗಳನ್ನು ಉಪಯೋಗಿಸುವರೊ ಇಲ್ಲವೂ ಅರಿಯ ಬೇಕಾಗುತ್ತದೆ.

1. ಮಾದಕ ವಸ್ತುಗಳ ಸೇವನೆಯು ಹೆಚ್ ಐ ವಿ ಪಡೆಯಲು ಪ್ರಮುಖ ಕಾರಣವಾಗಿದ್ದು ಅಂತಹ ದುಶ್ಚಟವನ್ನು ತೊರೆಯಿರೆಂದು ವಿವರಿಸಿ.

2. ಮಾದಕ ವಸ್ತುಗಳಿಂದ ದೂರವಿರಬೇಕೆಂದು ರೋಗಿಗಳನ್ನು ಸಕಾರಣ ನೀಡಿ ಪ್ರೋತ್ಸಾಹಿಸುವುದಷ್ಟೇ ಅಲ್ಲದೆ, ಎಲ್ಲ ಮಾದಕ ವ್ಯಸುನಿಗಳಿಗೆ ಈ ಕೆಳಗಿನ ವಿಷಯಗಳ ಬಗ್ಗೆ ಜಾಗೃತರಾಗಿರುವಂತೆ ತಿಳಿಹೇಳಬೇಕು.
   - ಯಾವುದೆ ರೀತಿಯ ಉಪಕರಣಗಳೂ, ಕುಕ್ಕರ್, ಸೂಜಿ ಹಾಗು ಇತರ ವಸ್ತುಗಳನ್ನು ಎಂದಿಗೂ ಹಂಚಿಕೊಳ್ಳಬಾರದು.
   - ಚುಚ್ಚಿಕೊಳ್ಳಲು ಬಳಸುವ ವಸ್ತುಗಳನ್ನು ಪ್ರತಿಬಾರಿಯು ಚೆನ್ನಾಗಿ ತೊಳೆಯಬೇಕು (ಪಿಚಕಾರಿಯನ್ನು ಬ್ಲೀಚ್‌ಮಾಡಿ ನಂತರ ನೀರಿನಲ್ಲಿ ತೊಳೆಯಬೇಕು).

3. ಮಾದಕ ವ್ಯಸನಿಗಳಿಗಾಗಿ ನಡೆಸಲಾಗುವ ತರಬೇತಿಕಾರ್ಯಕ್ರಮದಲ್ಲಿ ಭಾಗವಹಿಸಲು ನಿಮ್ಮ ಸಲಹೆಗೆ ಬಂದವರಿಗೆ ಹೇಳಿ ಕಳಿಸಿ.

## ಇ. ಮಾಧಕ ವ್ಯಸನಿಗಳ ಇತರ ನಡವಳಿಕೆಗಳು :

ಈ ಕೆಳಗಿನ ಮಾಧಕ ವಸ್ತುಗಳನ್ನು ಉಪಯೋಗಿಸುವುದರಿಂದ ಅವರಿಗೆ ಸುರಕ್ಷಿತ ಸಂಭೋಗ ಕ್ರಿಯೆಯಲ್ಲಿ ತೊಡಗಲಾಗುವುದಿಲ್ಲವೆಂದು ವಿವರಿಸಿ ಮನದಟ್ಟು ಮಾಡಿಕೊಡಿ :

- ಮದ್ಯಸೇವನೆ
- ಮರಿಜುವನ
- ಮತ್ತು ಬರಿಸುವ ವಸ್ತುಗಳು (ಕೆಳಗಿನವು)
- ಉತ್ತೇಜಕ / ಉದ್ರೇಕಗೊಳಿಸುವಂತಹವು (ಮೇಲಿನವು) ಹಾಲುಸಿನೋಜೆನ್ಸ್
- ಕೊಕೈನ್, ಕ್ರಾಕ್
- ಹೆರಾಯಿನ್

ಕೊಕೈನ್ ಉಪಯೋಗವು – ಧೂಮಪಾನದಲ್ಲಿ ಅಥವಾ ನರಗಳಿಗೆ ಚುಚ್ಚಿಕೊಳ್ಳುವುದರಲ್ಲಿ – ಹೆಚ್ ಐ ವಿ ಹೊಂದಿರುವವರಿಗೆ ಅತ್ಯಂತ ಹಾನಿಕಾರಕವಾಗಿವೆ. ಸಂಶೋಧನೆಗಳ ಪ್ರಕಾರ ತಿಳಿಯಲ್ಪಡುವ ವಿಷಯವೆಂದರೆ ಹೆರಾಯಿನ್‌ಗೆ ಹೋಲಿಸಿದಾಗ, ಕೊಕೈನ್ ಬಳಕೆಯಲ್ಲಿ ಉಪಯೋಗಿಸಿ ಹಂಚಿಕೊಳ್ಳುವ ಸೂಜಿಯಿಂದ ಹೆಚ್ ಐ ವಿ ಸೋಂಕು ಅಧಿಕವಾಗಿ ಹರಡುತ್ತದೆ ಎಂಬುದು ತಿಳಿದು ಬಂದಿದೆ ಕೊಕೈನ್ ಮಾದಕ ವಸ್ತುವನ್ನು ಧೂಮಪಾನದ ರೀತಿ ಸೇವಿಸುವವರು ಕ್ರಾಕ್ ರೂಪದಲ್ಲಿ ಬಳಸುವವರಿಗೆ ಹೆಚ್ ಐ ವಿ ಸೋಂಕು ಅಸುರಕ್ಷಿತ ಲೈಂಗಿಕ ಕ್ರಿಯೆಯಿಂದ ಉಂಟಾಗುವ ಸಾಧ್ಯತೆಗಳು ಬಹಳವಿದೆ. ಲೈಂಗಿಕ ಕ್ರಿಯೆಗೆ ಬದಲಾಗಿ ಮಾದಕ ವಸ್ತುಗಳನ್ನು ಸೇವಿಸುವುದರಿಂದಲೂ, ಹಂಚಿಕೊಳ್ಳುವುದರಿಂದಲೂ ಸೋಂಕು ಹರಡುತ್ತದೆ. ಕ್ರಾಕ್ ಬಳಸಿ ಸೂಜಿಯ ಮೂಲಕ ಹೆರಾಯಿನ್ ಬಳಸುವವರಿಗೆ (ಮೇಲೆ ಅಥವಾ ಕೆಳಗೆ) ತೀವ್ರತರವಾದ ಪ್ರತಿಕ್ರಿಯೆಗಳು ಉಂಟಾಗುತ್ತವೆ.

## 4. ವೈಯುಕ್ತಿಕ ನಿಯಂತ್ರಣಾ ವ್ಯವಸ್ಥೆ :

ಅ. ಸಲಹೆಗೆ ಬಂದವರಿಗೆ ವೈಯುಕ್ತಿಕವಾಗಿ ಹಾನಿಯನ್ನು ಉಂಟುಮಾಡುವ ಹೆಚ್ ಐ ವಿ ಸೋಂಕು ಹರಡುವ ವಿಧಾನಗಳನ್ನು ತಿಳಿಸಿ ಅಂತಹ ಕಾರ್ಯಗಳನ್ನು ಕಡಿಮೆ ಮಾಡಿಕೊಳ್ಳಿರೆಂದು ವಿವರಿಸಿ.

ಆ. ನಿಯಂತ್ರಣಾ ವ್ಯವಸ್ಥೆಯನ್ನು ಪಡೆಯಲು ಅವರಿಗೆ ತಯಾರಿ ನೀಡಬೇಕು. ಇದನ್ನು ಅಭ್ಯಾಸ ಮಾಡಲು ಅವರಿಗಿರುವ ತೊಂದರೆಗಳಿವೆಯ ಎಂಬುದನ್ನು ಚರ್ಚಿಸಬೇಕು.

ಇ. ಕಾಂಡೂಮ್ ಉಪಯೋಗದ ಕುರಿತಾಗಿ ಸೂಕ್ತ ಮಾಹಿತಿ ನೀಡಬೇಕು. ರೋಗಿಗಳು ಒಂದೇ ಕಾಂಡೂಮ್ ಅನ್ನು ಪುನಃ ಉಪಯೋಗಿಸಬಾರದೆಂದು ಎಚ್ಚರಿಕೆ ನೀಡಬೇಕು.

ಈ. ಆರು ತಿಂಗಳ ಹಿಂದೆ ಹೆಚ್ ಐ ವಿ ಹಾನಿಯ ಬಗ್ಗೆ ಸಂಪರ್ಕ ನಡೆದಿದ್ದಲ್ಲಿ, ಅಂತಹವರನ್ನು ಮತ್ತು ಪರೀಕ್ಷೆಗೆ ಒಳಪಡಲು ತಿಳಿಹೇಳಬೇಕು.

ಉ. ರೋಗಿಗಳು ತಮ್ಮ ಇತರ ಸಂಗಾತಿಗಳೊಂದಿಗೆ ಲೈಂಗಿಕ ಕ್ರಿಯೆಯಲ್ಲಿ ತೊಡಗುವವರು ಮತ್ತು ಸೂಜಿಯ ಮೂಲಕ ಮಾದಕ ದ್ರವ್ಯ ಹಂಚಿಕೊಳ್ಳುವವರು – ಹೆಚ್ ಐ ವಿ ಯ ಹಾನಿಯ ಬಗ್ಗೆ ಚರ್ಚಿಸಲು ಹೇಳಬೇಕು. ಹೆಚ್ ಐ ವಿ ಹರಡುವಿಕೆಯ ಬಗ್ಗೆ ಸಂಗಾತಿಗಳಿಗೂ ಸೂಕ್ತ ಮಾಹಿತಿ ನೀಡಬೇಕು. ರೋಗಿ ಮತ್ತು ಸಂಗಾತಿಗಳು ನೆಗೆಟಿವ್ ಎಂದು ಖಚಿತವಾಗಿ, ಕಳೆದ ಆರು ತಿಂಗಳಲ್ಲಿ ಹಾನಿಕರಕ ಸಂಬಂಧ ಹೊಂದದಿದ್ದಲ್ಲಿ, ಹೆಚ್ ಐ ವಿ ಹರುಡುವಿಕೆ ಅವರಲ್ಲಿ ಸಾಧ್ಯವಿಲ್ಲವೆಂದು ತಿಳಿಯಬಹುದು.

## 5. ಸೂಕ್ತ ಸಾಹಿತ್ಯವನ್ನು ಒದಗಿಸಬೇಕು :

ಸಲಹೆಗೆ ಬಂದವರು ಅಕ್ಷರಸ್ತರಾಗಿದ್ದಲ್ಲಿ ಅವರಿಗೆ ಹೆಚ್ ಐ ವಿ ಹರಡುವಿಕೆ ಮತ್ತು ಅದರ ನಿಯಂತ್ರಣದ ಬಗೆಗೆ ಪುಸ್ತಕ, ಪ್ರಕಟಣೆಗಳನ್ನು ಓದಿ ಅರಿಯಲು ನೀಡಬೇಕು ಜೊತೆಗೆ ಲೈಂಗಿಕತೆಯಲ್ಲಿ ಅಪಾಯವನ್ನು ತಗ್ಗಿಸುವ ವಿಧಾನ, ಮಾದಕ ವಸ್ತುವಿನ ಉಪಯೋಗವನ್ನು ಕಡಿಮೆ ಮಾಡುವ ರೀತಿ, ಸೂಜಿ ಮತ್ತು

ಇತರ ವಸ್ತುಗಳನ್ನು ಶುಚಿಗೊಳಿಸುವ ಬಗ್ಗೆ ಇರುವ ಕರ ಪತ್ರಗಳು, ಹೆಚ್ ಐ ವಿ ಬಗ್ಗೆ ಆಪ್ತಸಲಹೆ ಮತ್ತು ಪರೀಕ್ಷಾ ಕಾರ್ಯಕ್ರಮಗಳ ಕುರಿತಾಗಿ ಇರುವ ಕಿರುಹೊತ್ತಿಗಳನ್ನು ಓದಿ ತಿಳಿದುಕೊಳ್ಳುವಂತೆ ಹೇಳಬೇಕು.

**ಸೆರೊ ಪಾಸಿಟಿವ್ - ಪರೀಕ್ಷಾ ನಂತರದ ಆಪ್ತಸಲಹಾಕಾರ್ಯಕ್ರಮ :**

ಹೆಚ್ ಐ ವಿ ಪಾಸಿಟಿವ್ ಎಂಬ ಫಲಿತಾಂಶವನ್ನು ಪಡೆಯುವುದೆಂದರೆ ಅತೀವಗಾಭರಿ, ನೋವು ಉಂಟಾಗುವುದು. ಭೀತಿ, ನಿರಾಶೆಗಳಿಗೆ ಸೂಕ್ತ ಸಾಂತ್ವನ ನೀಡಲು ತಯಾರಾಗಿರಿ. ಸಹಾಯ ನೀಡುವ ಸಂಸ್ಥೆಗಳು ಕೂಡಲೇ ಯಾವರೀತಿಯ ಸಹಾಯ ನೀಡಿ, ಆಘಾತವನ್ನು ಪರಿಹರಿಸಬೇಕು ಎಂಬುದನ್ನು ತಿಳಿದಿರಬೇಕು.

**1. ಪರೀಕ್ಷೆಯ ಫಲಿತಾಂಶ :**

ಈ ಮೊದಲೆ ಹೇಳಿರುವ ವಿಧಾನವನ್ನು ಪುನರಾವರ್ತಿಸಿ.

**2. ರೋಗಗಳಿಗೆ ಪರೀಕ್ಷೆಯ ಫಲಿತಾಂಶದ ನಂತರ ಸಹಾಯ ಸಾಂತ್ವನ ಹೇಳುವುದು :**

ಅ. ಅನುಕಂಪದ, ಸಹಾಯಹಸ್ತದ, ಸ್ಫೂರ್ತಿದಾಯಕ ನುಡಿಗಳನ್ನು ಆಡಿರಿ.

ಆ. ಸಲಹೆಗೆ ಬಂದವರ ಭಾವನೆಗಳನ್ನು ಅರಿತು ನಡೆದುಕೊಳ್ಳಬೇಕು, ಅಪನಂಬಿಕೆ, ಭೀತಿ, ಭಯ, ಕೋಪ, ಖಿನ್ನತೆ, ಸಾವಿನ ಭಯ, ಇವುಗಳೆಲ್ಲ ಅವರಲ್ಲಿ ತುಂಬಿರುತ್ತದೆ. ರೋಗಿಯು ದುಃಖದಿಂದ ಭೀತನಾಗಿದ್ದರೆ

- ಅವರೊಡನೆ ಇದ್ದು ಪರಿಸ್ಥಿತಿಯನ್ನು ಎದುರಿಸಲು ಸಹಾಯ ಮಾಡಿ, ಅವರ ಬೇಡಿಕೆ, ಅನಿಸಿಕೆಗಳನ್ನು ಆಲಿಸಬೇಕು.
- ತೊಂದರೆಗಳನ್ನು ಪರಿಹರಿಸಲು ಸಹಾಯ ಮಾಡಬೇಕು.
- ಜೊತೆಗೆ ತಲೆದೋರುವ ಇತರ ಸಂಕಷ್ಟಗಳನ್ನು ಪರಿಹರಿಸುವ ಉಪಾಯ ತಿಳಿಸಬೇಕು.
- ಸಂಕಷ್ಟ ನಿವಾರಿಸುವ ಸೇವಾ ಸಂಸ್ಥೆಗಳ ಮೂಲಕ ಅನುಕೂಲ ಮಾಡಿಕೊಟ್ಟು ರೋಗಿಗಳಿಗೆ ಮಾತನಾಡಲು ರಹಸ್ಯಕೋಣೆಯಲ್ಲಿ ದೂರವಾಣಿ ಇರಿಸಬೇಕು.

ಇ. ರೋಗಿಯ ಮನೋಭಾವವನ್ನು ಪರೀಕ್ಷೆಯ ಫಲಿತಾಂಶದ ನಂತರ ಅರಿತು ಮುಂದಿನ 48 ಘಂಟೆಗಳಲ್ಲಿ ಅವರು ಯಾವರೀತಿ ವರ್ತಿಸುವರೆಂದು ನೋಡಿ ಕೊಂಡು ವಿಷಯವನ್ನು ಸಂಗ್ರಹಿಸಬೇಕು.

ಈ. ಪರೀಕ್ಷೆ ಪೂರ್ವ ಅವರಿಗೆ ತಿಳಿಸಲಾಗಿದ್ದ ಸಹಾಯಕ ಸೇವೆಗಳನ್ನು ಪುನಃ ತಿಳಿಸಬೇಕು. ರೋಗಿಯು ಪರೀಕ್ಷೆಯ ಫಲಿತಾಂಶದ ನಂತರ ಅದರ ಬಗ್ಗೆ ಯಾರಸಂಗಡ ಮಾತನಾಡಬಹುದೆಂದು – ಕುಟುಂಬದ ಸದಸ್ಯರು, ಸ್ನೇಹಿತರ, ಇತರರು – ಇಚ್ಛಿಸಿತ್ತಾರೋ ಆದರ ಬಗ್ಗೆ ಕೇಳಿರಿ. ಅವರು ಯಾರನ್ನಾದರೂ ಗುರುತಿಸಿದಲ್ಲಿ ಅಂತಹವರೊಡನೆ ಯಾವರೀತಿ ವಿಷಯ ವ್ಯಕ್ತಪಡಿಸುತ್ತಾರೆ ಮತ್ತು ಅವರ ಪ್ರತಿಕ್ರಿಯ ಹೇಗಿರುತ್ತದೆ ಎಂಬುದನ್ನು ತಿಳಿದು ಕೊಳ್ಳಿ.

ಉ. ಅವರ ಬಾವನಾತ್ಮಕ ಸಂಬಂಧಗಳಿಗೆ ತಕ್ಕಂತೆ ವ್ಯಕ್ತಿಗಳನ್ನು ಭೇಟಿಯಾಗಲು ಸೂಚಿಸಿರಿ.

**3. ಪರೀಕ್ಷೆಯ ಫಲಿತಾಂಶ ಪಾಸಿಟಿವ್ ಎಂಬುದರ ಅರ್ಥ :**

ಅ. ಪರೀಕ್ಷೆಯ ಫಲಿತಾಂಶವು ಹೆಚ್ ಐ ವಿ ಗೆ ಆಂಟಿಬಾಡಿ ಇರುವುದು ಕಾಣಿಸಿದಾಗ :

1. ಆ ವ್ಯಕ್ತಿಗೆ ಹೆಚ್ ಐ ವಿ ಸೋಂಕು ತಗುಲಿದೆ, ರೋಗಾಣುಗಳಿಂದ ಆಂಟಿಬಾಡಿಗಳು ಉತ್ಪತ್ತಿಯಾಗಿದೆ.
2. ರೋಗಿಯಲ್ಲಿ ಕ್ರಿಯಾತ್ಮಕ ವೈರಸ್‌ಗಳಿದ್ದು ಅದು ಇತರರಿಗೂ ಸೋಂಕಿನಂತೆ ಹರಡಬಹುದು.

ಆ. ಪರೀಕ್ಷೆ ಫಲಿತಾಂಶವು ಪಾಸಿಟಿವ್ ಎಂದು ಗೊತ್ತಾದ ಕೂಡಲೇ ರೋಗಿಗೆ ಏಯ್‌ಡ್ಸ್ ಬಂದಿದೆ ಎಂದು ಅರ್ಥವಲ್ಲ.

**4. ವೈದ್ಯಕೀಯ ಸಹಾಯದ ಮುಂದುವರಿಕೆ :**

ಅ. ಆದಷ್ಟು ಬೇಗನೆ ವೈದ್ಯಕೀಯ ರಕ್ಷಣೆ ಪಡೆಯಲು ಹೇಳಿ ಅದರ ಪ್ರಾಮುಖ್ಯತೆಯನ್ನು ವಿವರಿಸಿರಿ.

1. ಪ್ರಯೋಗಾಲಯದ ಪರೀಕ್ಷೆಗಳು ದೇಹದಲ್ಲಿನ ರೋಗ ನಿರೋಧಕ ಶಕ್ತಿಯನ್ನು ತೋರಬಹುದು ಮತ್ತು ಹೆಚ್ ಐ ವಿ ಸೋಂಕು ಅಥವಾ ಗ್ರಂಥಿಗಳು ಇರುವುದನ್ನು ತಿಳಿಸಬಹುದು.
2. ಔಷಧೋಪಚಾರಗಳು ಮಾಡಿಕೊಳ್ಳುವುದರಿಂದ ಹೆಚ್ ಐ ವಿ ಯ ಬೆಳವಣಿಗೆಯನ್ನು ಕುಂಠಿತಗೊಳಿಸಬಹುದು ಮತ್ತು ಕೆಲವು ಸೋಂಕುಗಳನ್ನು ತಡೆಯಬಹುದು.

ಆ. ವೈದ್ಯಕೀಯ ಮೌಲ್ಯಮಾಪನವು ಈ ಕೆಳಗಿನವುಗಳನ್ನು ಹೊಂದಿರುತ್ತದೆ ಎಂದು ವಿವರಿಸಿರಿ :

1. ವೈದ್ಯಕೀಯ ಮತ್ತು ವೈಯುಕ್ತಿಕ ವಿವರಗಳು.
2. ದೇಹದ ತಪಾಸಣೆ.
3. ರೋಗ ನಿರೋಧಕ ಶಕ್ತಿಯ ಪರೀಕ್ಷೆ,
4. ಇತರ ಗುಪ್ತರೋಗಗಳ ಸೋಂಕು ಕ್ಷಯರೋಗದ ಪರೀಕ್ಷೆ,

ಇ. ಒಳ್ಳೆಯ ಸ್ವಾಸ್ಥ್ಯ ರಕ್ಷಣೆಯ ಅಭ್ಯಾಸದ ಬಗ್ಗೆ ಅದರ ಪ್ರಾಮುಖ್ಯತೆಯ ಕುರಿತಾಗಿ ತಿಳುವಳಿಕೆ ನೀಡಿರಿ.

ಈ. ವೈದ್ಯಕೀಯ ಉಪಚಾರಗಳನ್ನು ನಿಯಮಿತವಾಗಿ ಪಡೆಯಲು, ಸೂಕ್ತ ಪರೀಕ್ಷೆಗಳನ್ನು ಮಾಡಿಸಿಕೊಳ್ಳಲು ಮತ್ತು ನವೀನ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಅವರಿಗೆ ಮಾಹಿತಿನೀಡಿ.

ಉ. ನಿಮಗೆ ಪಾಸಿಟಿವ್ ಪರೀಕ್ಷೆ ಫಲಿತಾಂಶವಿದೆ ಎಂದು ಕಂಡುಬಂದಲ್ಲಿ ನಿಮ್ಮ ಸಂಗಾತಿಗಳಿಗೆ ಮತ್ತು ಮಕ್ಕಳಿಗೆ ಹೆಚ್ ಐ ವಿ ಸೋಂಕು ಹರಡುವ ಸಾಧ್ಯತೆ ಇದೆಯೆಂದು ವಿವರಿಸಿ ಹೇಳಿರಿ.

ಇದು ನಿಮ್ಮಲ್ಲಿಗೆ ಸಲಹೆಗೆ ಬಂದವರ ಪ್ರಥಮ ಹೆಚ್ ಐ ವಿ ಪರೀಕ್ಷೆಯಾಗಿದ್ದಲ್ಲಿ, ಅವರಿಗೆ ತಿಳಿಸ ಬೇಕಾದುದು ಏನೆಂದರೆ ಮೊದಲು ಅವರ ಸಂಗಾತಿಗಳು ಮತ್ತು ಮಕ್ಕಳು ಹೆಚ್ ಐ ವಿ ಆಂಟಿಬಾಡಿ ಪರೀಕ್ಷೆ ಮತ್ತು ವೈದ್ಯಕೀಯ ತಪಾಸಣೆ ಮಾಡಿಸಿಕೊಳ್ಳಲು ಬಲವಂತ ಪಡಿಸಬೇಕು. ಅವರಿಗೆ ಹಾಗು ಅವರ ಸಂಗಾತಿ ಹಾಗು ಮಕ್ಕಳಿಗೆ ಸೂಕ್ತ ವೈದ್ಯಕೀಯ ಮತ್ತು ಆಪ್ತಸಲಹಾ ಕಾರ್ಯಕ್ರಮಗಳನ್ನು ನಿಗಧಿಗೊಳಿಸಬೇಕು.

ನಿಮ್ಮಲ್ಲಿಗೆ ಬಂದವರು ವಿವಾಹಿತರಾಗಿದ್ದು ಅವರ ಪತ್ನಿಯು ಗರ್ಭಿಣಿಯಾಗಿದ್ದಲ್ಲಿ ಅಥವಾ ಇತ್ತೀಚಿಗೆ ಮಗು ಜನಿಸಿದ್ದಲ್ಲಿ, ಅವರಿಗೆ ಖಂಡಿತ ಈ ಕೆಳಗಿನ ವಿಷಯತಿಳಿಸಬೇಕು :

1. ಎಲ್ಲ ಶಿಶುಗಳು ತಾಯಿಯಿಂದ ಆಂಟಿಬಾಡಿಯನ್ನು ಪಡೆದಿರುತ್ತವೆ. ಆದಕಾರಣ ತಾಯಿಯಲ್ಲಿ ಹೆಚ್ ಐ ವಿ ಆಂಟಿಬಾಡಿಗಳು ಇದ್ದಲ್ಲಿ ಆ ಮಗುವುಸಹ ಹೆಚ್ ಐ ವಿ ಆಂಟಿಬಾಡಿ ಪರೀಕ್ಷೆಗೆ ಒಳಪಟ್ಟು ಅದು ಇರುವುದನ್ನು ತಿಳಿಯಬೇಕು.

2. ತಾಯಿಯಲ್ಲಿ ಹೆಚ್ ಐ ವಿ ಸೋಂಕು ಇದ್ದರೂ ಸಹ ಮಗುವಿಗೆ ಇದು ಖಂಡಿತ ಇರಲೇ ಬೇಕೆಂದಿಲ್ಲ. ಸಂಶೋಧನೆಗಳ ಆದಾರದಿಂದ ಹೇಳುವುದೇನೆಂದರೆ ಶೇ 30 – 50 ರಷ್ಟು ಶಿಶುಗಳು ಹುಟ್ಟುವಾಗಲೇ ತಾಯಿಯಿಂದ ಈ ಸೋಂಕನ್ನು ತಾವಾಗಿಯೇ ಪಡೆದಿರುತ್ತವೆ.

3. ಹಾಗೇನಾದರೂ ಮಗುವಿಗೆ ಸೋಂಕು ಇಲ್ಲದಿದ್ದಲ್ಲಿ, ಮಗುವು 18 – 24 ತಿಂಗಳ ಸಮಯದಲ್ಲಿ ಪರೀಕ್ಷಿಸಲ್ಪಟ್ಟಾಗ ನೆಗಟಿವ್ ಎಂದು ಬರಬೇಕು.

4. ಮಗುವಿಗೆ ನಿಜವಾಗಿ ಸೋಂಕು ತಗುಲಿದ್ದಲ್ಲಿ, ಜನನದ ಸಮಯದಲ್ಲಿಯೇ ಪಾಸಿಟಿವ್ ಇರುವುದು ನಿಜವಾಗುತ್ತದೆ. ಆ ನಂತರ ಕೆಲಕಾಲ ನೆಗೆಟಿವ್ ಇದ್ದು ಮತ್ತು ಪಾಸಿಟಿವ್ ಆಗುವ ಸಾಧ್ಯತೆಗಳಿವೆ. ಮಗುವಿನಲ್ಲಿ ಸ್ವಂತವಾಗಿ ಆಂಟಿಬಾಡಿಗಳು ಉತ್ಪತ್ತಿಯಾದಾಗ ಹೀಗಾಗಬಹುದು.

5. ಇಂತಹ ಸಮಯದಲ್ಲಿ ಮಗುವನ್ನು ಉಪಚರಿಸುವ ವೈದ್ಯರು ನಿಯಮಿತವಾಗಿ ಔಷಧಿ ನೀಡಬೇಕು ಮತ್ತು ಅವರು ಮಗುವಿನ ತಾಯಿಗೆ ಸೋಂಕಿರುವುದನ್ನು ಅರಿತು ಅವರ ಸ್ವಾಸ್ಥ್ಯದ ಸ್ಥಿತಿಯನ್ನು ಆಮೂಲಾಗ್ರವಾಗಿ ಅರಿತು ಔಷಧಿ ಮಾಹಿತಿ ನೀಡಬೇಕು.

6. ಹೆಚ್ ಐ ವಿ ಬಗ್ಗೆ ಅರಿವಿರುವ ವೈದ್ಯರೊಡನೆ ಚರ್ಚಸಿ ಮಗುವಿಗೆ ಮೊಲೆಹಾಲು ಕುಡಿಸಲು ಆರಂಭಿಸುವ ಮುನ್ನ ನಿರ್ಧರಿಸಿ ಅದರಿಂದ ಉಂಟಾಗಬಹುದಾದ ಅಪಾಯವನ್ನು ತಪ್ಪಿಸುವದಾರಿ ಕಂಡುಕೊಳ್ಳಬೇಕು.

7. ರೋಗಿಯು ಭವಿಷ್ಯದಲ್ಲಿ ಪುನಃ ಮಕ್ಕಳನ್ನು ಪಡೆಯ ಬೇಕೆಂದು ಯೋಚಿಸಿದ್ದರೆ, ಅವರು ವೈದ್ಯರೊಡನೆ ಸಮಾಲೋಚನೆ ನಡೆಸಿ ಪುನರ್‌ಸೃಷ್ಠಿಯ ಆಯ್ಕೆಯನ್ನು ಕೂಲಂಕುಶವಾಗಿ ನಿರ್ಧರಿಸಬೇಕು.

## 5. ಹರಡುವಿಕೆಯನ್ನು ಕಡಿಮೆಗೊಳಿಸುವಿಕೆ :

ಸಲಹೆಗೆ ಬಂದವರು ಸ್ವತ ಹೆಚ್ ಐ ವಿ ಸೋಂಕನ್ನು ಪಡೆಯದಿದ್ದರೂ ಸಹ, ಅವರಿಗೆ ಇತರರಿಂದ ಸೋಂಕು ಉಂಟಾಗುವ ಸಾಧ್ಯತೆಗಳು ಉಂಟಾಗಬಹುದು :

- ಯಾವಾಗ ಎಂದರೆ ಲೈಂಗಿಕ ಕ್ರಿಯೆಯಲ್ಲಿ ಕಾಂಡೂಮ್ ಉಪಯೋಗಿಸದೆ ಇದ್ದಾಗ ಅಥವಾ ಸರಿಯಾದ ರೀತಿಯಲ್ಲಿ ಉಪಯೋಗಿಸದಿದ್ದಾಗ;
- ಮಾಧಕ ವಸ್ತು ಸೇವನೆಯ ಸಮಯದಲ್ಲಿ ಸೂಜಿ ಹಾಗು ಇತರ ವಸ್ತುವನ್ನು ಶುಚಿಗೊಳಿಸದೆ ಹಂಚಿಕೊಂಡಾಗ – ಸೋಂಕು ಹರಡುವುದು ಖಚಿತ.

ಹೆಚ್ ಐ ವಿ ಯು ಸಾಮಾನ್ಯ ಗೃಹೋಪಕರಣಗಳ ಉಪುಯೋಗದಿಂದ ಹರಡುವುದಿಲ್ಲ. ಹಾನಿಯನ್ನು ತಗ್ಗಿಸುವ ವಿಧಾನಗಳ ಬಗ್ಗೆ ಚರ್ಚಿಸತಕ್ಕದ್ದು. ರೋಗಿಯ ಲೈಂಗಿಕ ಕ್ರಿಯೆ ಮತ್ತು ಮಾದಕ ವಸ್ತು ಸೇವನೆಯ ಬಗ್ಗೆ ವಿಮರ್ಶಿಸಿ ನಿರ್ಧಾರ ಕೈಗೊಳ್ಳಬೇಕು.

ಈ ಕೆಳಗೆ ಹೇಳಲಾಗಿರುವ ನಿಯಮಗಳನ್ನು ಪಾಲಿಸುವುದರಿಂದ ಸೋಂಕು ಉಂಟಾಗದೆ ಇರುವುದನ್ನು ತಡೆಯಬಹುದು ಮತ್ತು ಇತರರಿಗೆ ನಿಮ್ಮಿಂದ ಹೆಚ್ ಐ ವಿ ಸೋಂಕು ಹರಡದಂತೆ ನಿಯಂತ್ರಿಸಬಹುದು. ಹಾನಿಯನ್ನು ತಗ್ಗಿಸುವ ಈ ವಿಧಾನಗಳನ್ನು ರೋಗಿಗಳಿಗೂ ಹಾಗು ಅವರೊಡನೆ ಲೈಂಗಿಕ ಕ್ರಿಯೆಯಲ್ಲಿ ತೊಡಗುವ ಸಂಗಾತಿಗಳಿಗೂ ವಿವರಿಸಿ ತಿಳಿಸಬೇಕು.

**ಅ. ಲೈಂಗಿಕ ಕ್ರಿಯೆಯಲ್ಲಿ ಅಪಾಯವನ್ನು ಕಡಿಮೆಗೊಳಿಸುವ ವಿಧಾನಗಳು :**

1. ಯೋನಿ, ಮುಖ ಅಥವಾ ಗುದ ಮೈಥುನಗಳಲ್ಲಿ ತೊಡಗದೆ ಇರುವುದರಿಂದ ಹೆಚ್ ಐ ವಿ ಸೋಂಕನ್ನು ನಿಯಂತ್ರಿಸಬಹುದು.

2. ಗುದ ಮೈಥುನ, ಯೋನಿ ಸಂಭೋಗ, ಜನನಾಂಗದ ಮುಖ ಮೈಥುನ - ಇಂತಹ ಸಮಯದಲ್ಲಿ ದೇಹದಿಂದ ಹೊರಬರುವ ದ್ರವಗಳು (ವೀರ್ಯ, ರಕ್ತ ಮತ್ತು ಯೋನಿದ್ರವಗಳು) ಹೊರಬರುತ್ತವೆ. ಇವುಗಳು ಸಂಭೋಗಿಸುವವರ ದೇಹದೊಳಗೆ ಸೇರದಿರಲು ಸೂಕ್ತ ಕಾಂಡೂಮ್‌ಗಳನ್ನು ಸರಿಯಾದ ರೀತಿಯಲ್ಲಿ ಪ್ರತಿಬಾರಿಯು ಹೊಸದಾಗಿ ಉಪಯೋಗಿಸಬೇಕು. ಕಾಂಡೂಮ್‌ಗಳು ಅಪಾಯವನ್ನು ತಗ್ಗಿಸಬಹುದು. ಆದರೆ ಸಂಪೂರ್ಣವಾಗಿ ತೊಡೆದುಹಾಕಲಾರದು, ಸರಿಯಾದ ವಿಧಾನದಲ್ಲಿ ಕಾಂಡೂಮ್ ಉಪಯೋಗಿಸಲು ಹೇಳಿಕೊಡಿ ಎಂದೆಂದೂ ಒಮ್ಮೆ ಉಪಯೋಗಿಸಿದ ಕಾಂಡೂಮ್ ಮತ್ತೆ ಉಪಯೋಗಿಸದಂತೆ ಎಚ್ಚರಿಕೆ ನೀಡಿರಿ.

3. ಮುಖ ಮೈಥುನ ಸಮಯದಲ್ಲಿ ಯೋನಿ ಅಥವಾ ಜನನಾಂಗದ ಸೂಕ್ತ ಹುಣ್ಣು, ಗಾಯ, ಗಂಟುಗಳು ಇದ್ದಲ್ಲಿ ಹೆಚ್ ಐ ವಿ ಸೋಂಕು ಒಬ್ಬರಿಂದ ಇನ್ನೊಬ್ಬರಿಗೆ ಹರಡುವ ಅಪಾಯ ಅಧಿಕವಾಗಿದೆ.

4. ವಿವಾಹಿತರಿಗೆ, ಜನನ ನಿಯಂತ್ರಣ ವಿಧಾನದ ಬಗ್ಗೆ ಚರ್ಚಿಸಿ ಸೋಂಕಿನ ಬಗ್ಗೆ ವಿವರ ನೀಡಿ ಜೊತೆಗೆ ಇತರ ಅಪಾಯಗಳು ಉಂಟಾಗಬಹುದೆಂದು ವಿವರಿಸಿ ಹೇಳಿರಿ. ರೋಗಿಗೆ ಒತ್ತಿ ಹೇಳಬೇಕಾದದು ಏನೆಂದರೆ ಗರ್ಭ ನಿರೋಧಕ ಗುಳಿಗೆಗಳು ಸೋಂಕನ್ನು ತಡೆಯಲಾರದು ಮೂತ್ರಕೋಶಗಳಿಗೆ ಕವಚ ಹಾಕಿ ಸಂಭೋಗಿಸಿದಾಗಲು ಹೆಚ್ ಐ ವಿ ಸೋಂಕು ಹರಡುವ ಸಾಧ್ಯತೆ ಇದೆ.

**ಆ. ಮಾದಕ, ವಸ್ತುಗಳನ್ನು ಉಪಯೋಗಿಸುವಾಗ ಅಪಾಯ ತಗ್ಗಿಸುವಿಕೆ ಈ ಮೊದಲೇ ವಿವರಿಸಲಾಗಿದೆ.**

**ಇ. ಇತರ ಮುಖ್ಯವಾದ ಅಪಾಯ ತಗ್ಗಿಸುವ ವಿಧಾನಗಳು :**

ಹೆಚ್ ಐ ವಿ ಪಾಸಿಟಿವ್ ಬಳಲುವ ರೋಗಿಗೆ ಉಪದೇಶಿಸಬೇಕಾದುದು ಏನೆಂದರೆ :

1. ರಕ್ತ ಮತ್ತು ರಕ್ತದ ಉತ್ಪತ್ತಿಗಳಿಂದ ಅಂಗಗಳು, ಟಿಶ್ಯು, ಮೊಲೆಹಾಲು, ವೀರ್ಯ, ಅಂಡಾಣುಗಳನ್ನು ಎಂದಿಗೂ ದಾನರೂಪದಲ್ಲಿ ನೀಡಬೇಡಿ.

2. ಹಲ್ಲುಜ್ಜುವ ಬ್ರಷ್, ಕ್ಷೌರದ ಬ್ಲೇಡ್ ಹಾಗು ಇತರ ಯಾವುದೇ ವಸ್ತುಗಳು ರಕ್ತಕ್ಕೆ ಸಂಬಂಧಿಸಿದವುಗಳನ್ನು ಹಂಚಿಕೊಳ್ಳಬೇಡಿ. ಇವುಗಳಿಂದ ಹೆಚ್ ಐ ವಿ ಸೋಂಕಿನ ಅಪಾಯವಿಲ್ಲದಿದ್ದರೂ ಎಚ್ಚರಿಕಾ ಕ್ರಮವಾಗಿ ಇವುಗಳನ್ನು ಸೂಚಿಸಲಾಗಿದೆ.

3. ರಕ್ತ ಅಥವಾ ದೇಹದ ಯಾವುದೇ ದ್ರವ ಚೆಲ್ಲಿರುವ ಸ್ಥಳದಲ್ಲಿ ಸೂಕ್ತ ಕ್ರಿಮಿನಾಶಕ ಉಪಯೋಗಿಸಿ ಬ್ಲೀಚ್ ಮಾಡಿ ನೀರಿನಿಂದ  ಶುಚಿಗೊಳಿಸಬೇಕು.

**ಈ. ವ್ಯಕ್ತಿಗತವಾಗಿ ಅಪಾಯವನ್ನು ತಗ್ಗಿಸುವ ವಿಧಾನಗಳು :**

1. ಹೆಚ್ ಐ ವಿ ಸೋಂಕನ್ನು ಸಂಗಾತಿಗಳಿಗೆ ಹರಡದಿರಲು ಅನುಸರಿಸಬೇಕಾದ ವಿಧಾನ, ಉಪಾಯ, ಎಚ್ಚರಿಕೆಗಳ ಬಗ್ಗೆ ಚರ್ಚಿಸಿರಿ.

2. ಅವರಿಗೆ ಇಂತಹ ವಿಧಾನಗಳನ್ನು ಪಾಲಿಸುವುದರಲ್ಲಿ ಏನಾದರೂ ತೊಂದರೆ ಅಡೆತಡೆಗಳು ಇದೆಯೆ ಎಂದು ವಿಚಾರಿಸಿ ಸಲಹೆನೀಡಿ.

3. ಕಷ್ಟದ ಪರಿಸ್ಥಿತಿಯಲ್ಲಿ ಯಾವ ರೀತಿಯ ನಿರ್ಧಾರ ತೆಗೆದುಕೊಳ್ಳಬೇಕು ಎಂಬುದನ್ನು ತಿಳಿಹೇಳಿರಿ.

**6. ನಿರಂತರವಾಗಿ ವ್ಯಕ್ತಿಗಾತವಾಗಿ ಯೋಚಿಸಬೇಕಾದುದು**

**ಅ. ವೈದ್ಯಕೀಯ ಮತ್ತು ಇತರ ಸಹಾಯಕ ಸೇವೆಗಳು.**

1. ಸೆರೂ ಪಾಸಿಟಿವ್ ವ್ಯಕ್ತಿಗಳನ್ನು ಸರಿಯಾದ ವೈದ್ಯಕಿಯ ಉಪಚಾರ ಪಡೆಯಲು ಕಳಿಸಿರಿ.
2. ಸ್ಥಳೀಯ ಪಾಸಿಟಿವ್ ಸಹಾಯಕ ಸಮೂಹಗಳಿಗೆ ಇವರನ್ನು ಪರಿಚಯಿಸಿ ಅವರಿಂದ ಬೇಕಾದ ಉಪಯೋಗ ಸಹಾಯಪಡೆಯಲು ಹೇಳಿರಿ.
3. ಹೆಂಡ, ಸಾರಾಯಿ ಸೇವಿಸುವವರು ಮತ್ತು ಮಾದಕ ವ್ಯಸನಿಗಳನ್ನು ಅವರಿಗಾಗಿ ಏರ್ಪಡಿಸುವ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಿರಿ.

ರೋಗಿಗಳು ತಮಗೆ ಬೇಕಾದಾಗ ಸೇವೆ ಪಡೆಯಲು ಸೂಕ್ತ ಸ್ಥಳಗಳನ್ನು ನಿಗಧಿಗೊಳಿಸಿ ಎಲ್ಲ ಸೇವೆಗಳು ಲಭ್ಯವಾಗುವ ಅವಕಾಶ ಕಲ್ಪಿಸಿಕೊಡಿ. ಗುಪ್ತ ಸಂಭಾಷಣೆಗಳಿಗೆ ದೂರವಾಣಿ ಸೌಲಭ್ಯ ಮಾಡಿಕೊಡಿ.

**ಆ. ಸಂಗಾತಿಗಳಿಗೆ ತಿಳುವಳಿಕೆ :**

ಹೆಚ್ ಐ ವಿ ಪಾಸಿಟಿವ್ ಎಂದು ದೃಢ ಪಟ್ಟ ವ್ಯಕ್ತಿಯು ತನ್ನ ಸಂಗಾತಿಗಳಿಗೆ ಈ ವಿಷಯವನ್ನು ತಿಳಿಸಬೇಕು:

1. ರೋಗಿಯನ್ನು ತಮ್ಮ ಸಂಗಾತಿಗಳ ಸಂಗಡ ಹೆಚ್ ಐ ವಿ ಯಿಂದ ಉಂಟಾಗುವ ಅಪಾಯದ ಬಗ್ಗೆ ಚರ್ಚಿಸಿರುವಿರಾ ಮತ್ತು ಪರೀಕ್ಷೆಯ ಬಗ್ಗೆ ಅರಿತಿರುವರೋ ಇಲ್ಲವೋ ತಿಳಿದುಕೊಳ್ಳಿ.

2. ಇಂತಹ ವಿಷಯಗಳನ್ನು ಸಂಗಾತಿಗಳಿಗೆ ಹೇಳುವಂತೆ ಪ್ರೋತ್ಸಾಹಿಸಿ ಅವರು ಈ ವಿಷಯವನ್ನು ಯಾವರೀತಿ ವ್ಯಕ್ತಪಡಿಸಬೇಕೆಂದು ಹೇಳಿಕೊಡಿರಿ.

3. ಸಾಧ್ಯವಾದರೆ ಸಂಗಾತಿಗಳಿಗೂ ಈ ಪರೀಕ್ಷೆಗೆ ಒಳಪಡಲು ಒತ್ತಾಯಿಸಿರಿ ಇಲ್ಲದಿದ್ದಲ್ಲಿ ಅವರನ್ನು ಹೆಚ್ ಐ ವಿ ಆಪ್ತ ಸಲಹಾಕಾರರನ್ನು ಭೇಟಿಯಾಗಲು ಹೇಳಿರಿ ಅವರು ಅನಕ್ಷರಸ್ತರಾಗಿದ್ದಲ್ಲಿ ಅವರನ್ನು ಕರೆದುಕೊಂಡು ಹೋಗಿ ಪರಿಚಯಿಸಿ ಪರೀಕ್ಷೆ ಮಾಡಿಸಿಕೊಳ್ಳಲು ತಿಳಿಹೇಳಿರಿ.

4. ಸಂಗಾತಿಗಳು ಹೆಚ್ ಐ ವಿ ಸ್ಥಿತಿಯ ಬಗ್ಗೆ ಏಕೆ ಕಾಳಜಿ ವಹಿಸಬೇಕೆಂದರೆ :
   - ಅದು ಪಾಸಿಟಿವ್ ಎಂದು ತಿಳಿದು ಬಂದಲ್ಲಿ ವೈದ್ಯಕೀಯ ತಪಾಸಣೆ, ಉಪಚಾರ ಮುಂದುವರಿಸಬಹುದು.
   - ಆರಂಭದಲ್ಲಿ ಔಷಧಿ ತೆಗೆದುಕೊಂಡಲ್ಲಿ ಹೆಚ್ ಐ ವಿ ನಿಯಂತ್ರಿಸಬಹುದು ಮತ್ತು ಮುಂಬರುವ ಸೋಂಕುಗಳನ್ನು ತಡೆಗಟ್ಟಬಹುದು.

**7. ಸಾಹಿತ್ಯವನ್ನು ನೀಡುವುದು :**

ಈ ಮೊದಲೇ ವಿವರಿಸಲಾಗಿದೆ.

**8. ಭೇಧ ಭಾವ ನಡವಳಿಕೆ :**

ಈ ಮೊದಲೇ ವಿವರಿಸಲಾಗಿದೆ.

**ಸಾರ ಸಂಗ್ರಹ :**

**ಪರೀಕ್ಷೆಗೆ ಮೊದಲು :**

ಒಂದು ಒಳ್ಳೆಯ ಆಪ್ತಸಲಹೆ ನೀಡುವವನು ಸಲಹೆ ಪಡೆಯಲು ಬಂದವರ ಸಂಗಡ ಇವುಗಳ ಬಗ್ಗೆ ಚರ್ಚಿಸಬೇಕು :

1. ಹೆಚ್ ಐ ವಿ / ಏಯ್ಡ್ಸ್ ಕುರಿತಾಗಿ ಮತ್ತು ಅವುಗಳಿಂದಾಗುವ ಅಪಾಯ.
2. ಏತಕ್ಕಾಗಿ ಅವರನ್ನು ಪರೀಕ್ಷಿಸಬೇಕು.
3. ಅವರು ಅಪಾಯದಲ್ಲಿದ್ದಾರೆಂದು ಏಕೆ ಯೋಚಿಸಬೇಕು.

4. ಪರೀಕ್ಷಾ ವಿಧಾನ ಗಳೇನು.
5. ಫಲಿತಾಂಶವು ನೆಗೆಟಿವ್ ಎಂಬುದರ ಅರ್ಥವೇನು.
6. ಫಲಿತಾಂಶವು ಪಾಸಿಟಿವ್ ಎಂಬುದರ ಅರ್ಥವೇನು.
7. ಯಾರಿಗೆ ಫಲಿತಾಂಶವನ್ನು ಹೇಳಬೇಕು.
8. ವೈಯುಕ್ತಿಕ ಲೈಂಗಿಕ ಆರೋಗ್ಯ ಕುಶಲತೆಯನ್ನು ಅಭಿವೃದ್ಧಿಗೊಳಿಸುವುದು.

**ಪರೀಕ್ಷೆಯ ನಂತರ :**

**ಈ ವಿಷಯಗಳ ಬಗ್ಗೆ ಪರೀಕ್ಷೆಯ ನಂತರ ಚರ್ಚಿಸಬೇಕು**

1. ಪರೀಕ್ಷೆಯ ಫಲಿತಾಂಶದ ಅರ್ಥವೇನು.
2. ಫಲಿತಾಂಶ ಅರಿತ ನಂತರ ಆವನು ಹೇಗೆ ವರ್ತಿಸುತ್ತಾನೆ.
3. ಸುರಕ್ಷಿತ ಲೈಂಗಿಕ ಕ್ರಿಯೆ ಮತ್ತು ಸುರಕ್ಷಿತ ಸೂಜಿ ಚುಚ್ಚುವ ವಿಧಾನ.
4. ಸ್ವಾಸ್ಥದ ಬಗ್ಗೆ ಸಂರಕ್ಷಣೆ ನೀಡುವಿಕೆ.
5. ರಕ್ಷಣಾ ವಿಧಾನಗಳನ್ನು ರೋಗಿಗೆ ತಿಳಿಹೇಳುವುದು.
6. ರೋಗಿಯು ಯಾರಿಗೆ ತನ್ನ ಕಾಯಿಲೆ ಬಗ್ಗೆ ಹೇಳುತ್ತಾನೆ.
7. ಸಂಗಾತಿಗಳಿಗೆ ಸೂಚಿಸುವ ವಿಧಾನ.

**ಆಪ್ತ ಸಲಹಾ ಕಾರ್ಯದಲ್ಲಿರುವವರಿಗೆ ಒಳ್ಳೆಯ ಕೆಲಸ ಮಾಡಲು ಮಾರ್ಗದರ್ಶನ :**

1. ನಿಮ್ಮ ಮನೆಯ ಅಥವಾ ಕಾರ್ಯಲಯದ ದೂರವಾಣಿ ಸಂಖ್ಯೆ ಯಾರಿಗೊ ನೀಡಬೇಡಿರಿ.

2. ಸಮಯಪಾಲನೆ ಮತ್ತು ಸೇವೆ ಪಡೆಯುವವರ ಸಂಗಡ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳಿರಿ ಇಬ್ಬರಿಗೂ ಸೂಕ್ತ ಸಮಯವನ್ನು ನಿಗಧಿಗೊಳಿಸಿಕೊಳ್ಳಿ. ಭೇಟಿಗೆ ಯಾವಾಗಲೂ ನಿಧಾನವಾಗಿ ಹೋಗಬೇಡಿ, ಕಾಯಿಸಬೇಡಿ ಅಧಿಕ ಸಮಯವನ್ನು ಕಳೆಯಬೇಡಿ ಉದಾಹರಣೆಗೆ ಒಂದು ಘಂಟೆಯ ಚರ್ಚೆಯನ್ನು ಮೂರು ಘಂಟೆಗಳಿಗೆ ಎಳೆಯಬೇಡಿ. ಸಮಯವನ್ನು ವ್ಯರ್ಥಮಾಡಿ ಇತರ ಕಾರ್ಯಗಳಿಗೆ ತೊಂದರೆ ನೀಡಬೇಡಿ.

3. ಆಪ್ತ ಸಲಹೆ ನೀಡುವವರು ಯಾವುದೇ ಕಾರಣ ಸಂದರ್ಭದಲ್ಲೂ ಹಣ, ಅಥವಾ ಉಡುಗೊರೆ ಸ್ವೀಕರಿಸಬಾರದು.

4. ಸಲಹೆ ಪಡೆಯ ಬಯಸುವವರೊ ತಮಗಿಷ್ಟವಾದ ಸೂಕ್ತ ವ್ಯಕ್ತಿಗಳನ್ನು ಆಪ್ತಸಲಹೆ ನೀಡಲು ಆಯ್ದು ಕೊಳ್ಳಬೇಕು. ಅದನ್ನು ಆಪ್ತಸಲಹೆ ನೀಡವವರು ಸೂಚಿಸಬಾರದು. ಆಪ್ತ ಸಲಹೆ ನೀಡುವವರ ಮತ್ತು ಪಡೆಯುವವರ ನಡುವಿನ ಸಂಬಂಧದ ವಿಷಯವನ್ನು ಸರಿಯಾಗಿ ವಿವರವಾಗಿ ತಿಳಿಸಬೇಕು. ಸೇವೆ ಪಡೆಯುವವರು ಸಲಹೆ ನೀಡುವವರೆಂದು ತಮ್ಮ ಕುಟುಂಬದ ವ್ಯಕ್ತಿಯಾಗಿ ಪರಿಗಣಿಸಬಾರದು ಹಾಗೇನಾದರೂ ಆಗಿದ್ದಲ್ಲಿ ಉನ್ನತ ಅಧಿಕಾರಿಗಳಿಗೆ ಈ ಬಗ್ಗೆ ತಿಳಿಸಬಹುದು. ಆಪ್ತ ಸಲಹೆ ನೀಡುವವರು ಈ ಕಾರ್ಯವನ್ನು ತಮ್ಮ ಏಜೆನ್ಸಿ, ಸಂಸ್ಥೆಯ ಮೂಲಕ ನೀಡುತ್ತಿದ್ದಾರೆ. ಈ ಬಗ್ಗೆ ಸಲಹೆ ಪಡೆಯುತ್ತಿರುವವರಿಗೆ ಸರಿಯಾದ ಮಾಹಿತಿ ನೀಡಬೇಕು. ಈ ಬಗ್ಗೆ ಸೂಕ್ತ ಬೇಲಿ ಹಾಕಿ ಕೊಳ್ಳುವುದು ಅವಶ್ಯ ಮತ್ತು ಎಲ್ಲ ಸಮಯದಲ್ಲೂ ಇದು ಮಿತಿಮೀರದಂತೆ ಎಚ್ಚರಿಕೆ ವಹಿಸಬೇಕು.

5. ಸಲಹೆ ನೀಡುವವರು ಅಥವಾ ಪಡೆಯುವವರು ಒಪ್ಪಿಕೊಂಡ ಸಮಯದಲ್ಲಿ ಭೇಟಿಯಾಗಲು ಸಾಧ್ಯವಾಗದಿದ್ದರೆ ಕೊಡಲೇ ವ್ಯವಸ್ಥಾ ಪಕರಿಗೆ ಈ ಕುರಿತಾಗಿ ತಿಳಿಸಬೇಕು.

6. ಯಾವುದೇ ಕಾರಣ, ಉದ್ದೇಶದಿಂದಲೂ ಸಲಹೆ ನೀಡುವ ಮತ್ತು ಪಡೆಯವವರ ನಡುವೆ ಹಣ ನೀಡಿ / ಪಡೆಯುವ ವ್ಯವಹಾರ ಇರಬಾರದು.

7. ಆಪ್ತಸಲಹೆ ನೀಡುವವರು ಪಡೆಯುವವರ ಪರವಾಗಿ ಯಾವುದೇ ರೀತಿಯ ಅರ್ಜಿನಮೂನೆಗಳಿಗೆ ಸಹಿಹಾಕಬಾರದು ಇದು ಅವರ ಜವಾಬ್ದಾರಿಯಲ್ಲ, ಕೆಲಸವಲ್ಲ.

8. ಆಪ್ತ ಸಲಹೆ ನೀಡುವವರು ರೋಗಿಯ ಕುರಿತಾಗಿ ಯಾವುದೇ ವಿಷಯವನ್ನು ಇತರರಿಗೆ ಹೇಳಬಾರದು. ಕೇವಲ ವ್ಯವಸ್ಥಾಪಕರಿಗೆ ಮಾತ್ರ ತಿಳಿಸಬಹುದು.

9. ಆಪ್ತ ಸಲಹೆ ನೀಡುವವರು ಪಡೆಯಲು ಬಂದವರ ಸಂಗಡ ಯಾವುದೇ ಕಾರಣಕ್ಕು ರಾತ್ರಿಯ ವೇಳೆ ಜೊತೆಗೆ ಇರಬಾರದು.

10. ಇವರ ಮತ್ತು ಇವರ ಕುಟುಂಬದವರ ಸಂಗಡ ಯಾವುದೇ ರೀತಿಯ ಲೈಂಗಿಕ ಸಂಪರ್ಕ ಹೊಂದಿರಬಾರದು ಹಾಗೇನಾದರೂ ಸೆಳೆತ ಆಕರ್ಷಣೆ ಇದ್ದಲ್ಲಿ ವ್ಯವಸ್ಥಾಪಕರ ಗಮನಕ್ಕೆ ಕೂಡಲೇ ತರಬೇಕು.

11. ಆಪ್ತ ಸಲಹೆ ನೀಡುವವರು ಯಾವುದೇ ಕಾರಣದಿಂದಲೂ ಕೂಡಲೇ ಸೇವೆ ಪಡೆಯಲು ಬಂದವರಿಗೆ ಔಷಧಿನೀಡಿ ಅನೈತಿಕ ಉಪಚಾರ ನೀಡಬಾರದು. ಹಾಗೇನಾದರೂ ಅವರು ನೀಡಲು ಬಂದಲ್ಲಿ ಕೂಡಲೇ ವ್ಯವಸ್ಥಾಪಕರಿಗೆ ತಿಳಿಸಬೇಕು.

12. ಆಪ್ತ ಸಲಹೆ ನೀಡುವವರು ಪಡೆಯಲು ಬಂದವರ ಸಂಗಡ ಮಾದಕ ಪೇಯವನ್ನು ಮೊದಲಾಗಲಿ ಆಮೇಲಾಗಲಿ ಸೇವಿಸಬಾರದು.

13. ಈ ಎಲ್ಲ ನಿಯಮಗಳನ್ನು ಆಪ್ತಸಲಹೆ ನೀಡುವವರು ಪಾಲಿಸದಿದ್ದಲ್ಲಿ ಅಥವಾ ಯಾವುದನ್ನಾದರೂ ಮುರಿದಲ್ಲಿ ಶಿಸ್ತಿನ ಕ್ರಮ ಕೈಗೊಂಡು ಅವರನ್ನು ಒಪ್ಪಂದದಿಂದ ವಜಾ ಮಾಡಬಹುದು ತಿರಸ್ಕರಿಸಬಹುದು.

14. ಆಪ್ತ ಸಲಹೆ ಪಡೆಯಲು ಬಂದವರು ನಿಮಗೇನಾದರೂ ದೈಹೀಕವಾಗಿ ಅಥವಾ ಮಾತಿನಿಂದ ಹಿಂಸೆನೀಡಲು ಮುಂದಾದಲ್ಲಿ ನೀವು ಕೊಡಲೇ ವ್ಯವಸ್ಥಾಪಕರಿಗೆ ಈ ಬಗ್ಗೆ ವಿವರಿಸಿ ಹೇಳಬಹುದು. ಅವರಿಂದ ಈ ಸೇವಾಕಾರ್ಯವನ್ನು ಹಿಂತೆಗೆದುಕೊಳ್ಳಬಹುದು.

## ಗೌಪ್ಯತೆಯ ಬಗ್ಗೆ ಹೇಳಿಕೆ

ನಾನು ........................................ ಹೆಚ್ ಐ ವಿ / ಏಯ್‌ಡ್ಸ್ ಮತ್ತು ಲೈಂಗಿಕ ಸ್ವಾಸ್ಥ್ಯ ಸಂಸ್ಥೆಯಲ್ಲಿ ಪುರುಷರು ಇತರ ಪುರುಷರೊಡನೆ ಕ್ರಿಯೆಯಲ್ಲಿ ತೊಡಗಿರುವರ ಸಂಗಡ ಕಾರ್ಯ ನಿರ್ವಹಿಸುತ್ತಿದ್ದೇನೆ.

ಇದರಲ್ಲಿ ನಾನು ಕಾರ್ಯದಲ್ಲಿ ತೊಡಗಿರುವಾಗ ಹಲವಾರು ವ್ಯಕ್ತಿಗಳ ಅತ್ಯಂತ ರಹಸ್ಯ ಮತ್ತು ಗೌಪ್ಯವಾದ ವಿಷಯಗಳನ್ನು ಅರಿಯುವ ಸಾಧ್ಯತೆ ಇದೆ. ಇದರಲ್ಲಿ ಅವರ ಲೈಂಗಿಕ ವ್ಯವಹಾರ, ಲೈಂಗಿಕ, ಹೆಚ್ ಐ ವಿ ಸ್ಥಿತಿ, ಏಯ್‌ಡ್ಸ್ ಉಪಚಾರ ಸ್ವಾಸ್ಥ್ಯತೆ, ವೈದ್ಯಕೀಯ ಪರಿಸ್ಥಿತಿ ಉಪಕಾರಗಳು ಮತ್ತು ಕೌಟುಂಬಿಕ ವಿವರಗಳು ಸೇರಿರುತ್ತವೆ.

ನಾನು ಈ ಎಲ್ಲ ವಿಷಯಗಳು ಅತ್ಯಂತ ಗೋಪನೀಯವೆಂದು ಅಂತಿರುವೆ ಯಾವುದೇ ವಿವರ, ವಿಷಯಗಳನ್ನು ವೈಯುಕ್ತಿಕ ಹಾಗು ಗೌಪ್ಯ ವಿಷಯಗಳನ್ನು ಸಂಸ್ಥೆಗೆ ಸಂಬಂಧಿಸದ ಯಾರಿಗೂ ನೀಡುವುದಿಲ್ಲ ಮತ್ತು ಸಂಸ್ಥೆಯಲ್ಲಿ ಕೇವಲ ಇದರ ಸಂಬಂಧಿಸಿದವರಿಗೆ ಮಾತ್ರ ನೀಡಲಾಗುವುದು.

ಹಾಗೇನಾದರೂ ನಾನು ಈ ರಹಸ್ಯವನ್ನು ಭೇದಿಸಿದಲ್ಲಿ, ನನ್ನ ವಿರುದ್ದ ಶಿಸ್ತಿನ ಕ್ರಮ ತೆಗೆದುಕೊಳ್ಳಬಹುದು.

ತಾರೀಕು :

ಹೆಸರನ್ನು ಮುದ್ರಿಸಿರಿ

ಹಸ್ತಾಕ್ಷರ